# ಅಚಲ

ಬಿಡಿಪ್ರತಿ : 4 ರೂ. ತಿಂಗಳ ಪತ್ರಿಕೆ ಜುಲೈ - 2006

ಒಳಗೇನಿದೆ



ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ,
ಬೆಂಗಳೂರು

# ಅಚಲ

ಸಂಪುಟ - 21 ಸಂಚಿಕೆ : 1



*ಪ್ರಕಾಶಕರು*

ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ

ಬೆಂಗಳೂರು

ಚಂದಾ ಹಣವನ್ನು ಚೆಕ್‌ನಲ್ಲಿ ಕಳುಹಿಸುವವರು ಬ್ಯಾಂಕ್ ಕಮೀಷನ್ ಸೇರಿಸಿ ಕಳುಹಿಸಬೇಕು. ಎಂ.ಓ. ಫಾರ್ಮಿನ ಕೊನೆಯ ಭಾಗದಲ್ಲಿ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ನಮೂದಿಸಬೇಕು. ಬದಲಾದ ವಿಳಾಸವನ್ನು ದಯವಿಟ್ಟು ಬರೆದು ತಿಳಿಸಿ.

**Achala - Edited by Dr. N. Gayathri**

**Published by Dr. G. Ramakrishna on behalf of Jagruthi Mahila Adhyayana Kendra**

**Printed at**
Lipi Mudrana
**Bangalore - 560 004**

## ಬೆತ್ತಲು

'ಅತ್ಯಾಚಾರ ಪ್ರತಿಭಟಿಸಿ
ಮಣಿಪುರದ ಮಹಿಳೆಯರು ಬೆತ್ತಲಾದರು'
ಹೀಗೊಂದು ಸುದ್ದಿ
ದಿನಪತ್ರಿಕೆಯಲ್ಲಿ

ಬೆತ್ತಲಾಗುವ ಕ್ರಿಯೆ
ಇಂಥು ನಿನ್ನೆಯದಲ್ಲ
ಬೆತ್ತಲಾಗಿದ್ದಳು ಅಕ್ಕ
ಶತಮಾನಗಳ ಹಿಂದೆ, ಪತಿಯ ಧಿಕ್ಕರಿಸಿ

ಚಂದ್ರಗುತ್ತಿಯ ಬೋಳು ಗುಡ್ಡದ ಮೇಲೆ
ಬೆತ್ತಲಾದರು
ಹಿರಿ ಕಿರಿಯ ಹೆಣ್ಣುಗಳು
ದೇವರ ಹೆಸರಲ್ಲಿ

ವಿಧಿಯಿಲ್ಲದೆ ಬೆತ್ತಲಾದರು
ಯೆರ್ರವ್ವ ಶರಣವ್ವರು
ತಾವು ಮಾಡದ ತಪ್ಪಿಗೆ
ಪಾಪಿಗಳು ವಿಧಿಸಿದ ಶಿಕ್ಷೆಗೆ

ಬೆತ್ತಲಾದರು ವಿಶ್ವಸುಂದರಿಯರು
ನಟಿಯರು, ರೂಪದರ್ಶಿಗಳು
ಫ್ಯಾಷನ್ ಟಿ.ವಿ ವನಿತೆಯರು
ಸೌಂದರ್ಯದ ಹೆಸರಿನಲ್ಲಿ

ಸಂಪ್ರದಾಯದ ಕೋಟೆಯಲಿ
ಪುರುಷಾಧಿಪತ್ಯದ ಕವಚದಲಿ
ಉಸಿರುಗಟ್ಟಿರುವ ಹೆಣ್ಣಿನಂತರಂಗವು
ಬೆತ್ತಲಾಗುವುದೆಂತು?

- ಬಿ. ಮೈತ್ರಿ

(ಕರ್ನಾಟಕ ಲೇಖಕಿಯರ ಸಂಘ ಉದಯೋನ್ಮುಖ ಕವಯತ್ರಿಯರಿಗೆ ಕೊಡುವ ಬಹುಮಾನವು ಈ ವರ್ಷ ಈ ಕವಿತೆಗೆ ಲಭಿಸಿದೆ)

ಅಚಲ ವಿಳಾಸ

108, ಸ್ಕೈಲೈನ್ ಸುರಭಿ, 14-ಪಿ, ವಿದ್ಯಾಪೀಠ ರಸ್ತೆ,
ಬನಶಂಕರಿ 3ನೇ ಹಂತ, ಬೆಂಗಳೂರು - 560 085.

## ಸಂಪಾದಕೀಯ

ದಿನಾಂಕ 9-7-2006 ರಂದು ಬೆಂಗಳೂರು ದೂರದರ್ಶನ ಕೇಂದ್ರದಲ್ಲಿ ಮಹಿಳೆಯರಿಗಾಗಿ 'ಹಲೋ ಮುಖ್ಯಮಂತ್ರಿ' ಕಾರ್ಯಕ್ರಮ ಏರ್ಪಾಟಾಗಿತ್ತು. ಕರ್ನಾಟಕದಾದ್ಯಂತ ಎಲ್ಲ ವರ್ಗದ ಮಹಿಳೆಯರ ಸಮಸ್ಯೆಗಳನ್ನು ಕ್ಲಿಪಿಂಗ್ಸ್ ಮೂಲಕ ಸಿ.ಎಂ. ರವರಿಗೆ ತೋರಿಸಿ ಪ್ರಶ್ನೆ ಕೇಳುವುದೇ ಅಲ್ಲದೇ ಫೋನ್‌ಗಳ ಮುಖಾಂತರವೂ ನಾಡಿನಾದ್ಯಂತ ಮಹಿಳೆಯರು ಪ್ರಶ್ನೆ ಕೇಳಬಹುದಾಗಿತ್ತು. ಜೊತೆಯಲ್ಲಿ ತುಮಕೂರು, ಮೈಸೂರು ಮುಂತಾದ ನಾನಾ ಕಡೆಗಳಿಂದ ಮತ್ತು ಬೆಂಗಳೂರಿಂದಲೂ ಬಂದ, ನಾವು 25 ಜನ ಅಲ್ಲಿ ಪ್ರಶ್ನೆಗಳನ್ನು ಕೇಳಲು ಸನ್ನದ್ಧರಾಗಿದ್ದೆವು. ಉದಯವಾಣಿಯ ಸಂಪಾದಕಿಯರಾದ ಡಾ. ಆರ್. ಪೂರ್ಣಿಮಾರವರು ನಿರೂಪಕಿಯಾಗಿ ಕೇಳಿದ ಮೊದಲ ಪ್ರಶ್ನೆಯೇ ' ನಿಮ್ಮ ಮಂತ್ರಿಮಂಡಲದಲ್ಲಿ ಯಾಕೆ ಒಬ್ಬ ಮಹಿಳೆಯೂ ಇಲ್ಲ 'ಎನ್ನುವುದಾಗಿತ್ತು. ಅವರೇ ಅಲ್ಲದೇ ಫೋನ್ ಮುಖಾಂತರ ಕೇಳಿದ ಮಹಿಳೆಯರೂ, ಇಲ್ಲಿ ಖುದ್ದಾಗಿ ಪ್ರಶ್ನೆ ಕೇಳಿದ ಮಹಿಳೆಯರೂ ಮೊದಲು ಪ್ರಸ್ತಾಪಿಸುತ್ತಿದ್ದುದು ಇದೇ ವಿಷಯವನ್ನೇ !

ಮುಖ್ಯಮಂತ್ರಿಯವರಿಗೆ ಈ ಪ್ರಶ್ನೆ ಹೊಸತೇನಲ್ಲ. ಇದುವರೆವಿಗೂ ಮಾಧ್ಯಮದವರೂ, ಅವರ ಸಹ ಮಹಿಳಾ ರಾಜಕಾರಿಣಿಗಳೂ, ಹೋದಬಂದಲ್ಲೆಲ್ಲಾ ಸಾರ್ವಜನಿಕರೂ, ಕಡೆಗೆ ಅವರದೇ ಮನೆಯ ಸದಸ್ಯರೂ ಕೇಳಿರಬಹುದಾದ ಪ್ರಶ್ನೆ ! ಈ ಹೊತ್ತಿಗೆ ಅನೇಕ ರೀತಿಯಲ್ಲಿ ಉತ್ತರ ಕೊಟ್ಟೂಕೊಟ್ಟೂ ಸಾಕಷ್ಟು ಜಡ್ಡು ಹಿಡಿದಿರುವ ವಿಚಾರ. ಆದ್ದರಿಂದ ಅಲ್ಲಿ ಹೊಸ ಆಶಯವೇನೂ ಹುಟ್ಟಿಕೊಳ್ಳಲಿಲ್ಲ. ''ಮಹಿಳಾ ಮಂತ್ರಿಗಳಿಲ್ಲದಿದ್ದರೇನು ಎಲ್ಲ ಇಲಾಖೆಯ ಹಿರಿಯ ಅಧಿಕಾರಿ ಸ್ಥಾನದಲ್ಲಿ ಮಹಿಳೆಯರನ್ನೇ ನೇಮಕ ಮಾಡಿದ್ದೇನೆ '' ಎಂದು ಹೇಳಿ ಎಲ್ಲ ಇಲಾಖೆಯ ಹೆಸರುಗಳೊಂದಿಗೆ ಮಹಿಳಾ ಅಧಿಕಾರಿಣಿಯರ ಹೆಸರನ್ನೂ ಹೇಳಿ, ಅಲ್ಲಿ ನೆರೆದಿದ್ದವರಿಗೆ ಪರಿಚಯ ಮಾಡಿಕೊಟ್ಟರು. ಈ ತಂತ್ರಕ್ಕೆ ಮಹಿಳೆಯರು ಯಾರೂ ಮರುಳಾಗಲಿಲ್ಲ. ಪೂರ್ಣಿಮಾರವರೇ ಹೇಳಿದರು'' ಈ ಅಧಿಕಾರಿಣಿರು ತಮ್ಮ ಯೋಗ್ಯತೆಯಿಂದ ಸ್ಥಾನವನ್ನು ಪಡೆದುಕೊಂಡಿದ್ದಾರೆ. ಇಷ್ಟಕ್ಕೇ ಮಹಿಳೆಯರು ಮಂತ್ರಿಗಳಾದಂತೆ ಆಗಲಿಲ್ಲ. ಮಹಿಳೆಯರಿಗೆ ನ್ಯಾಯವಾಗಿ ಸಿಗಬೇಕಾದ ಮಂತ್ರಿಪಟ್ಟ ಸಿಕ್ಕಂತಾಗಲಿಲ್ಲ''. ಈಗ ರಾಜಕಾರಿಣಿಯ ಮಾಮೂಲು ಉವಾಚ - ಮುಖ್ಯಮಂತ್ರಿಗಳಿಂದ, ''ಮುಂದಿನ ಸಂಪುಟಸಭೆ ವಿಸ್ತರಣೆಯಲ್ಲಿ ಖಂಡಿತಾ ಮಹಿಳೆಯರಿಗೆ ಸ್ಥಾನ ಕೊಡುತ್ತೇನೆ ''ಎನ್ನವುದು !! ಇಂಥಾ ಆಶ್ವಾಸನೆಗಳನ್ನು ಈಗ ಚಿಕ್ಕ ಮಕ್ಕಳೂ ನಂಬುವುದಿಲ್ಲ , ಬಿಡಿ.

ಮಹಿಳೆಯರ ಚಿಂತಾಜನಕ ಸ್ಥಿತಿಗಳನ್ನು ಪರದೆಯ ಮೇಲೆ ಮತ್ತು ಮಾತುಗಳಲ್ಲಿ ಕೇಳುತ್ತಾ ಹೋದಂತೆ ಮತ್ತೆ ಮಹಿಳೆಯರಿಂದ ಮಂತ್ರಿಪದವಿಯ ಮಾತುಬಂತು. ಅದಕ್ಕೆ ಮುಖ್ಯಮಂತ್ರಿಗಳು ಸ್ವಲ್ಪ 'ಡೆಸ್ಪರೇಟ್' ಆಗಿ ''ಮಹಿಳೆಯರು ಮಂತ್ರಿಯಾದರೇ ಮಹಿಳೆಯರ ಎಲ್ಲ ಸಮಸ್ಯೆಗಳೂ ಬಗೆಹರಿದು ಬಿಡುತ್ತವೆಯೇ?'' ಎಂದು ಉದ್ಗರಿಸಿದರು. ಇದೊಂದು ರೀತಿಯಲ್ಲಿ ವಿತ್ತಂಡವಾದ. ಮಹಿಳೆ ಮಂತ್ರಿಯಾದರೆ ಮಹಿಳೆಯ ಎಲ್ಲ ಸಮಸ್ಯೆಯೂ ಬಗೆಹರಿಯುತ್ತದೆ ಎನ್ನುವ ಮೌಢ್ಯ ಯಾವ ಮಹಿಳೆಗೂ ಇಲ್ಲ. ಪುರುಷರೇ ಮುಖ್ಯ ಮಂತ್ರಿಯಾಗುತ್ತಾ ಬಂದಿದ್ದಾರಲ್ಲ ಪುರುಷರ ಎಲ್ಲ ಸಮಸ್ಯೆಗಳೂ ಬಗೆಹರಿದಿವೆಯೇ? ಸಮಸ್ಯೆಗೂ ಮಂತ್ರಿಯಾಗುವಿಕೆಗೂ ಸಂಬಂಧವಿಲ್ಲ. ದೇಶದ ಅರ್ಧದಷ್ಟು ಜನಸಂಖ್ಯೆಯಲ್ಲಿರುವ ಒಂದು ವರ್ಗವನ್ನು ಮುಖ್ಯವಾಹಿನಿಯಿಂದ ದೂರತಳ್ಳಿ ಮೂಲೆಗುಂಪು ಮಾಡಿರುವುದೇತಕ್ಕೆ? ಮುಖ್ಯ ಮಂತ್ರಿಯವರ, ಅಥವಾ ಆಸ್ಥಾನದಲ್ಲಿ ಕುಳಿತ ಯಾವುದೇ ವ್ಯಕ್ತಿಯ ಹತಾಶೆ ಇಂದು ಎಲ್ಲರಿಗೂ ಅರ್ಥವಾಗುತ್ತದೆ. ಇಂದು ರಾಜ್ಯಾಂಗ ಎನ್ನುವುದು ನ್ಯಾಯದ ಮತ್ತು ಹಕ್ಕಿನ ನೆಲೆಯಮೇಲೆ ನಿಂತಿಲ್ಲ. ಅದು ಪಾರದರ್ಶಕವಾಗಿಯೂ ಇಲ್ಲ. ಮುಸುಕಿನೊಳಗಿನ ಗುದ್ದಾಟದಲ್ಲಿ ನ್ಯಾಯ ನೀತಿ ಪ್ರಜಾ ಧರ್ಮಗಳೆಲ್ಲ ದಿಕ್ಕಾಪಾಲಾಗಿ ಚದುರಿರುವುದು ಎಲ್ಲರಿಗೂ ಗೋಚರವಾಗುತ್ತಲೇ ಇದೆ.

ಮಹಿಳೆಯರ ಹಕ್ಕಿಗೆ ಮತ್ತೊಂದು ವ್ಯಾಪಕ ಹೋರಾಟವೇ ನಮಗುಳಿದಿರುವ ಮಾರ್ಗವೇನೋ?

# ದಂಡೆಯಾತ್ರೆ

- ಡಾ|| ಮಣಿಮಾಲಿನಿ ಎ. ಕೆ.

ಬೆಳಗ್ಗೆದ್ದು ತಲೆಬಾಗಿಲು ತೆಗೆಯುತ್ತಿದ್ದಂತೆ, ಶುಭದ ಒಸಗೆಗಳ ಓಲೆಕಾರನೆಂಬ ಗರ್ವದಿಂದ ಕತ್ತು ಕುಲುಕಿಸುತ್ತ, ಕಣ್ಣು ಕುಣಿಸುತ್ತ ಕೂತಿದ್ದ ಕುಪ್ಪುಳೊಂದು ಕಂಡಿತು. ಅದರ ಬೆನ್ನೇರಿ ಚೆಲುವು ಚೆಲ್ಲಾಡುತ್ತಿದ್ದ ದೂರದೂರಿನ ಒಡಲಾಳದಲ್ಲೆಲ್ಲೋ ಕೋಶಾವಸ್ಥೆಯಲ್ಲಿದ್ದ ಹಲವು ಸ್ಮೃತಿ ಚಿತ್ರಗಳು ಪಟಪಟನೆ ರೆಕ್ಕೆ ಬಿಡಿಸಿದವು. ಆ ನೆನಪಿನ ನಾವೆಯೊಳಗಿಣಿಕಿದಾಗ, ಮುಂಚೂಣಿಯಲ್ಲಿಯೇ ಎದುರಾದವಳು, ನಮ್ಮ ನೆಬ್ಬೀಸಾ..... ''ಕಾಗೆ ಕಪ್ಪು ಕುಪ್ಪು ಕೆಂಪು'' ಎಂದು ಜೋರು ಜೋರಾಗಿ ಹೇಳಬೇಕೆಂಬ ಸವಾಲನ್ನೂ, ಅದನ್ನು ನಿಭಾಯಿಸುವ ಚಾಕಚಕ್ಯತೆಯನ್ನೂ, ಇಂಥ ಎಷ್ಟೆಷ್ಟೋ ಕಣ್ಕಟ್ಟು ವಿದ್ಯೆಗಳನ್ನೂ ನಿರ್ವಂಚನೆಯಿಂದ ಮೊಗೆ ಮೊಗೆದು ಹಂಚುತ್ತಿದ್ದ ಎಳೆಯ ದಿನಗಳ ಸಂಗಾತಿ.

ವರ್ಷಗಳ ಹಿಂದೆ, ನಾನಿನ್ನೂ ತುಂಡುಲಂಗದ ಹಂತವನ್ನೂ ದಾಟದಿದ್ದ ಕಾಲದಲ್ಲಿ, ಮನೆಯ ಕೆಲಸಗಳಲ್ಲಿ ಅಮ್ಮನಿಗೆ ಸಹಾಯ ಮಾಡಲೆಂದು ಒಬ್ಬಳು ಬ್ಯಾರ್ತಿ ಬರುತ್ತಿದ್ದಳು. ಕಿಂದರಿ ಜೋಗಿಯ- ಆಣೆಯಾಗಿಯೂ ನಮಗ್ಯಾರಿಗೂ ಅವಳ ಹೆಸರೇನೆಂಬುದು ಗೊತ್ತಿರಲಿಲ್ಲ. ನಮ್ಮೆಲ್ಲರಿಗೂ ಅವಳು ಅಕ್ಕರೆ ತುಂಬಿದ ಬ್ಯಾರ್ತಿ ಮಾತ್ರವೇ..... ನಮ್ಮ ಮನೆಯ ಕೆಂಪು ಸಾರಣೆಯ ನೆಲವನ್ನು ಕಂದನ ಕೆನ್ನೆಯಷ್ಟು ಹೊಳಪಾಗುವಂತೆ ಒರೆಸಿಡುವ, ಆ ಕಾಲಕ್ಕೆ ಸ್ವಲ್ಪ ಅಪೂರ್ವವಾಗಿದ್ದ, ತೋರ ಮಟ್ಟಿಗೆ ದೇವಪ್ಪ ಸೆಟ್ರ ಅಂಗಡಿಯಾಗುವಷ್ಟಿದ್ದ ನಾನಾ ಗಾತ್ರ ಆಕಾರಗಳ ಸ್ಟೀಲು ಪಾತ್ರೆಗಳಿಗೆ ಇಷ್ಟೂ ಗೀರು ಬೀಳದ ಹಾಗೆ ತೊಳೆದು ಉಜ್ಜಿ, ಓರಣವಾಗಿ ಜೋಡಿಸುವ, ಜಾಲಿನಲ್ಲಿ ಒಂದು ಚೀಂಕ್ರು ಕಡ್ಡಿಯೂ ಇರದಂತೆ ಗುಡಿಸಿ, ಒಪ್ಪಕ್ಕಿಡುವ ಬ್ಯಾರ್ತಿಯೆಂದರೆ ನಮ್ಮ ಅಮ್ಮನ ಬಲದ ಕೈಯೇ ಆಗಿದ್ದಳು. ಅಮ್ಮನ ಅಡುಗೆ, ಒತ್ತರೆಗಳ ಹರದ ಸ್ವಂತದ ಲೋಟಣೆಗಳು ಹಾಗೂ ಬ್ಯಾರ್ತಿಯ ಸುತ್ತು ಕೆಲಸಗಳು ಮುಗಿದುವೆಂದರೆ ಸಾಕು ಅವರಿಬ್ಬರೂ ಸಮಸ್ತ ಲೋಕದ ಆಗು ಹೋಗುಗಳ ಖಾನೇಷುಮಾರಿ ತೆಗೆಯುತ್ತ ಲೊಟ್ಟೆ ಪಟ್ಟಾಂಗಗಳಲ್ಲಿ ಮುಳುಗುತ್ತಿದ್ದುದು, ನಮಗೆಲ್ಲ ತೀರಾ ಸಾಮಾನ್ಯ ದೃಶ್ಯವೇ.

ಸೂರ್ಯ ಬೇಕಾದರೆ ಮನಸ್ಸು ಬದಲಿಸಿ ಪಡುವಿನಲ್ಲಿ ಹುಟ್ಟಬಹುದು. ಆದರೆ ಬ್ಯಾರ್ತಿ ಮಾತ್ರ ಕೆಲಸಕ್ಕೆ ಬಾರದೆ ಉಳಿಯುತ್ತಿರಲಿಲ್ಲ. ಅಷ್ಟೂ ನಂಬಿಕಸ್ತೆ.

ಇಂಥದೇ ಒಂದು ಚೆಂದದ ಮುಂಜಾನೆ, ಇನ್ನು ಶಾಲೆಗೆ ಹೊರಡಬೇಕಲ್ಲಾ ಎಂಬ ಸಂಕಟದಿಂದ, ನಾನೂ ನನ್ನ ಒತ್ತಿನ ತಂಗಿ ಪಮ್ಮಿಯೂ ಆ ಯಮಗಂಡದಿಂದ ಪಾರಾಗಲು ಏನು ಕುಸಲು ಮಾಡಬಹುದೆಂಬ ಮಂತ್ರಾಲೋಚನೆಯಲ್ಲಿದ್ದೆವು. ಆಗ, ಬ್ಯಾರ್ತಿಯ ಹಿಂದೆ ಹುಗ್ಗಿಕೊಂಡೇ ಬರುತ್ತಿದ್ದ, ಅವಳ ಕಿರಿಯ ಅವತಾರದಂತಿದ್ದ ಆಕೃತಿಯೊಂದು ನಮ್ಮ ದೃಗ್ಗೋಚರವಾಯಿತು. ತಲೆಗೆ ಬಿಗಿದು ಕಟ್ಟಿದ್ದ ಕೆಂಪು ಹಸಿರು ಬಣ್ಣಗಳ ಎಲೆತ್ರ, ಅದರ ಅಂಕೆಯನ್ನು ದಾಟಿ, ಶುಭ್ರವಾದ ಬರಿಯ ಹಣೆಗೆ ಬೊಟ್ಟಿಡುತ್ತಿದ್ದ ಕೂದಲಗೊಂಚಲು, ಉದ್ದಕ್ಕೂ ಒಟ್ಟೆ ಮಾಡಿಸಿಕೊಂಡು ಅವಕ್ಕೆಲ್ಲ ಮಡಲು ಕಡ್ಡಿಗಳನ್ನು ಕುತ್ತಿಕೊಂಡಿದ್ದ ಕಿವಿಗಳು, ಒಂದು ಮಾದರಿ ಸಭಾಕಂಪನವನ್ನು ಹೊದ್ದುಕೊಂಡಿದ್ದ ಮುಖಭಾವ, ನಮ್ಮ ಕಡೆಯ ಆ ಸಮಾಜದ ಸಾಂಪ್ರದಾಯಿಕವಾದ ಮುಂಡು ಕುಪ್ಪಸ... ಹೆಚ್ಚೂ ಕಮ್ಮಿ ನಮ್ಮಷ್ಟೇ ವಯಸ್ಸಿನ ನೆಬ್ಬೀಸಾ, ನಮ್ಮ ಕಣ್ಣ್ - ಮನಗಳನ್ನು ಏಕಕಾಲಕ್ಕೆ ಪ್ರವೇಶಿಸಿದ ಪರಿಯಿದು. ನಮ್ಮ ಪ್ರೀತಿಯ ಬ್ಯಾರ್ತಿಯ ಈ ಮಗಳ ಸೇನಾಧಿಪತ್ಯದಲ್ಲಿ ನಮ್ಮ ದಂಡು ನಡೆಸಿದ ದಾಂಧಲೆಗಳಿಗೂ ಮಾಡಿದ ಅನಾಹುತಗಳಿಗೂ, ತಂದಿಟ್ಟ, ಕಷ್ಟ ಕೋಟಲೆಗಳಿಗೂ ತುದಿ ಮೊದಲೇ ಇಲ್ಲ. ತಕ್ಕೊಳ್ಳಿ 'ಶಾಲೆ' ಎನ್ನುವಂಥದರಲ್ಲಿ ಅಸಬಡಿಯುತ್ತಾ ಹೇಗೆ ಹೇಗೋ ಕಳೆಯುತ್ತಿದ್ದ ಕಾಲವನ್ನು ಹೊರತು ಪಡಿಸಿದರೆ, ಈ ನೆಬ್ಬೀಸಾ ಇಲ್ಲದೆ ನಾವು ಒಂದು ಗಳಿಗೆಯೂ ಇದ್ದವರಲ್ಲ. ಅವಳ ಧೈರ್ಯ, ಎಂಥ ಕುತ್ತದ ಮರವನ್ನಾದರೂ ಕ್ಷಣದಲ್ಲಿ ಏರುವ ನೈಪುಣ್ಯ, ಕಾಪಿಕಾಡಿನೊಳಗಿರುತ್ತಿದ್ದ ನಾನಾ ಹಣ್ಣು ಕಾಯಿಗಳಲ್ಲಿ ತಿನ್ನಬಹುದಾದವುಗಳನ್ನು ಕಂಡು ಹಿಡಿಯುವ ಜಾಣ್ಮೆ.... ಒಂದೇ ಎರಡೇ... ಅವಳು ಮುಂದೆ ಹೋದರೆ, ನಾನೂ ಪಮ್ಮಿಯೂ ಹಿಂದೆ... ಅಟೋರಿಕ್ಷಾದ ಮೂರು ಚಕ್ರಗಳಾಗಿ ಗಸ್ತು ಹೊಡೆಯುವುದೇ ಕ್ರಮ. ನೆಬ್ಬೀಸಾಳ ಮರ್ಜಿ ಬಂದ ಹಾಗೆ, ನಮ್ಮ ಪೀಕ್ಲಾಟಗಳಿಗೆಲ್ಲ ಒಮ್ಮೊಮ್ಮೆ ಒಳಾಂಗಣದ ರಂಗಸ್ಥಳವಾದರೆ, ಹಲವು ಬಾರಿ ಹೊರಾವರಣದ ಬಯಲು ಬೋದಿಗೆ....

ಆ ಸಂಜೆ ಆದುದಾದರೂ ಹಾಗೇ... ನಮ್ಮ ಪಡಿ ಬಿಡಾರ ಮನೆ ಸೇರಿದ ಕೂಡ್ಲೇ ನೆಬ್ಬೀಸಾ ಮುಂದಿನ ಕಾರ್ಯಕ್ರಮವನ್ನು ಸಾದರ ಪಡಿಸಿದಳು. ನಮ್ಮ ಮನೆಯ ಹಿಂದಿನ ಜೇರದ

ಆಚೆಗಿದ್ದ ಲಚ್ಮಿಯ ಬಾತುಕೋಳಿ ನಾಲ್ಕು ತತ್ತಿಯಿಟ್ಟಿದೆಯೆಂದೂ, ಅದನ್ನು ನೋಡಲು ನಾವೆಲ್ಲ ಹೋಗತಕ್ಕದ್ದೆಂದೂ ನೆಬ್ಬೀಸಾ ತನ್ನ ಫರ್ಮಾನನ್ನು ಪಿಸಪಿಸನೆ ಹೊರಡಿಸಿದಳು..... ಅಲ್ಲ, ಬಾತುಕೋಳಿ ಮೊಟ್ಟೆಯಿಟ್ಟರೆ ಅದಕ್ಕಾಯಿತು. ಅದನ್ನು ನೋಡಿದರೆ ನಮಗೆ ಬರುವ ಕೊಂಬೇನೋ ನನಗೆ ಅವತ್ತೂ ಗೊತ್ತಾಗಿರಲಿಲ್ಲ. ಇವತ್ತೂ ಗೊತ್ತಿಲ್ಲ ಬಿಡಿ.

ಇಂಥ ಬಿಂಗ್ರುಟ್ಟಿಗಳಿಗೆ ಹೋಗುವಾಗೆಲ್ಲ ನಾವು ನಮ್ಮ ಕಿರಿತಂಗಿ ಕಾಂತಿಯೂ ಸೇರಿಕೊಳ್ಳದಂತೆ ಜಾಗ್ರತೆ ಮಾಡಬೇಕಿತ್ತು. ಅವಳೋ, ಎತ್ತುವುದಕ್ಕೆ ದೊಡ್ಡವಳು, ನಡೆಯುವುದಕ್ಕೆ ಸಣ್ಣವಳು ಎಂಬಂಥ ಅತ್ತೂ ಅಲ್ಲದ ಇತ್ತೂ ಇಲ್ಲದ ಅವಸ್ಥೆಯಲ್ಲಿದ್ದವಳು. ಹಾಗಾಗಿ ಅವಳನ್ನು ನಿರ್ಬಂಧಿಸದೆ ನಮಗೆ ನಿರ್ವಾಹವಿರಲಿಲ್ಲ. ಆದುದರಿಂದ ಅವಳ ಸುತ್ತ ಸಣ್ಣ ಕೋರದ ಗುಡ್ಡೆಯಷ್ಟು ನೆಲಕಡಲೆ, ಒಂದು ನೀರುಪುಗ್ಗೆ, ಈಗಿನ 'ರಸ್ಕು' ಎನ್ನುವುದರ ಮುತ್ತಾತನಾಗಿರಬಹುದಾದ 'ಬಟರು'ಗಳ ಎಣೀಸಿ ಎಂಟು, ಟಿಪ್ಪು ಸುಲ್ತಾನನ ಫಿರಂಗಿಯಷ್ಟು ಉದ್ದದ ಲೋಟದಲ್ಲಿ ಅವಳ ಪ್ರಾಣವೇ ಆದ ಪುನರ್ಪುಳಿಯ ಶರ್ಬತ್ತುಗಳನ್ನೆಲ್ಲ ಹೊಂದಿಸಿಟ್ಟು ನಾವಲ್ಲಿಂದ ಪದ್ರಾಡಾದೆವು.

ಗುಡ್ಡದ ಜೇರದ ಬದಿಗೆ ಮುಟ್ಟಿದಾಗ, ನಮ್ಮ ನೇತಾರಳ ನೋಟ ಮರದಿಂದ ನೇತಾಡುತ್ತಿದ್ದ ನೆಲ್ಲಿಕಾಯಿಗಳ ಮೇಲೆ ನೆಟ್ಟಿತು. ಸರಿ ನಮ್ಮ ಚೈತ್ರಯಾತ್ರೆ ತನ್ನ ಮೂಲ ಉದ್ದೇಶವನ್ನು ಕೈಬಿಟ್ಟು ಪಾಪದ ನೆಲ್ಲಿಕಾಯಿ ಧ್ವಂಸಕ್ಕೆ ಸನ್ನದ್ಧವಾಯಿತು. ಆ ಹೋ..ತ್ತ ಮರವೋ, ಎರಡಾಳು ಕಂತದ ಗುಂಡಿಯ ಕರೆಯಲ್ಲಿ ಕೂತ ಭಂಗಿಯಲ್ಲಿ ಬಾಗಿಕೊಂಡಿತ್ತು. ಕರ್ತವ್ಯದಿಂದ ಹಿಮ್ಮೆಟ್ಟಿದರೆ ನಮ್ಮಂಥ ವೀರವನಿತೆಯರ ಅಬುರು ಎಳ್ಳಿನ ಏಳು ಪಾಲಾದರೂ ಉಳಿದೀತೋ.......... ಎಂದು ನೆಬ್ಬೀಸಾ ಆ ಮರದ ಕಣ್ಣೆಗೆಲ್ಲಿಗೆ ಹತ್ತಿದ್ದೂ, ನೆಲ್ಲಿಕಾಯಿಗಳನ್ನು ಕ್ಕೊಯ್ದು, ಎಲೆತ್ರದ ಕೊಡಿಯಲ್ಲಿ ಕಟ್ಟಿಕೊಂಡದ್ದೆಲ್ಲಾ ಸಾಂಗವಾಗಿ ನಡೆದುವು. ಆದರೆ ಇಳಿಯುವ ಭರದಲ್ಲಿದ್ದ ಅವಳ ಸೆರೆಯಿಂದ ಬಿಡಿಸಿಕೊಂಡ ನೆಲ್ಲಿಕಾಯಿಗಳು ಗಂಡಿಯೊಳಗೆ ಉದುರಿದುವು ಛೆ.... ಇಷ್ಟೆಲ್ಲಾ ಬಂಜ ಬಂದು ಬರಿಕೈಯಿಂದ ಹೋಗುವುದೇನು ಚಂದವೋ... ಮೇಲೆ ಮೇಲೆ ಕಾಣುವವುಗಳನ್ನಾದರೂ ಆಯೋಣ ಎಂದು ನೆಬ್ಬಿಸಾ ಗುಂಡಿಯ ಶಿರೋಭಾಗದಲ್ಲಿದ್ದ ಒಂದು ದಿಡ್ಡಿಗೆ ಇಳಿದಳು. ಒಂದಿಷ್ಟು ನೆಲ್ಲಿಕಾಯಿಗಳನ್ನು ಹೆಕ್ಕಿ ನಮಗೆ ಹಸ್ತಾಂತರಿಸಿದಳು ಕೂಡಾ. ಆಗ ಒಂದು ಮಲಾಮತ್ತಾಯ್ತು ನೋಡಿ. ಅವಳಿಗೆ ಆ ದಿಡ್ಡಿನಿಂದ ಮೇಲೆ ಬರಲು ಸಾಧ್ಯವೇ ಆಗಲಿಲ್ಲ. ಸಾಕಷ್ಟು ಪೆಡಚಾಡಿ, ಅನಂತರ ನಾವಿಬ್ಬರೂ ಅವಳ ಒಂದೊಂದು ಕೈಗೆ ಆಧಾರ ನೀಡಬೇಕೆಂಬ ಆದೇಶ ಅವಳಿಂದ ಬಂತು. ನಾವು ಹಾಗೇ ಮಾಡುವಂಥವರಾದೆವು. ಈ ನೆಬ್ಬೀಸಾ ನಮ್ಮ ಹಾಗೆ ಒಣಕಟೆಯಾಗಿರದೆ, ಗಟ್ಟಿ ಗಡತರವಾಗಿದ್ದುದೂ, ಅವಳ ಭಾರ ನಮ್ಮನ್ನು ಜಗ್ಗಿದ್ದು ಕಾರಣಗಳಾಗಿ ಕಡಿದು ಹಾಕಿದ ಹಲಸಿನ ಗುಜ್ಜಿಗಳ ಹಾಗೆ ನಾವು ಮೂವರೂ ಆ ಸತಂಪಾತಾಳದ ಗುಂಡಿಯೊಳಗೆ ಬಿದ್ದೆವು. ಪೂರ್ವಜರ ಪುಣ್ಯದಿಂದ ಅಲ್ಲೆಲ್ಲ ಹುಡಿ ಮಣ್ಣು ಹಾಸಿದ್ದುದರಿಂದ ನಮಗ್ಯಾರಿಗೂ ಹೇಳುವಂಥ ಪೆಟ್ಟಾಗಲಿಲ್ಲ. ಮೊದಲ ಸುತ್ತಿನಲ್ಲಿ ನಮ್ಮನ್ನು ನೆಬ್ಬೀಸಾಳೂ, ಅವಳನ್ನು ನಾವೂ ಬಯ್ದುಕೊಂಡದ್ದಾಯ್ತು. ಆವಾಗ ಮೈಮೇಲೆ ಜ್ಞಾನ ಬಂತು... ತಲೆಯೆತ್ತಿ ನೋಡಿದರೆ ಗುಂಡಿಯ ಕಿಂಡಿಯಿಂದ ಆಕಾಶ ಬರೀ ಒಂದು ಗೆರೆಯ ಹಾಗೆ ಕಂಡದ್ದು ನೋಡಿ ಸೊಲ್ಪ ಹೆದ್ರಿಕೆಯೂ ಆಯ್ತು. ಮನೆಗೆ ಕೇಳದಷ್ಟು ದೂರವಿದ್ದ ಈ 'ಖೆಡ್ಡಾ' ದಿಂದ ಹೊರಬೀಳುವುದರ ಬಗೆಗೆ, ಎರಡನೆಯ ಸುತ್ತಿನಲ್ಲಿ ಗಂಭೀರ ಚಿಂತನೆಗಳು ಮೊದಲಾದವು. ಪಮ್ಮಿಯಂತೂ ಕಂಗಾಲಾಗಿ, ಅಳುವಿನ ತಯ್ಯಾರಿ ನಡೆಸತೊಡಗಿದಳು. ಇಂಥ ಇಕ್ಕಟ್ಟಿನಲ್ಲೂ ಭೋಧ ಕಳೆದುಕೊಳ್ಳದೆ ನೆಬ್ಬೀಸಾ, ಶಾಂತಳಾಗಿಯೇ ನಾವೆಲ್ಲ ಏಕಕಂಠದಿಂದ ಕೂಕಿಲು ಹಾಕುತ್ತಾ ಇರಬೇಕೆಂದೂ, ಅದು ಯಾರ ಕಿವಿಗಾದರೂ ಕೇಳಿಸಿಯೇ ಕೇಳಿಸುತ್ತದೆಂದೂ, ಆಮೇಲೆ ಹೇಗಾದರೂ ಬಚವಾಗಬಹುದೆಂದೂ ಯೋಜನೆ ಹಾಕಿದಳು. ಅದನ್ನು ತಕ್ಷಣವೇ ಜಾರಿಗೆ ತರಲಾಯಿತು.

ಇಲ್ಲಿ ಈ ಸಂತೆಗಳೆಲ್ಲ ಸಾಗುತ್ತಿದ್ದರೆ, ಪರಪ್ರಾಂತ್ಯದಲ್ಲಿದ್ದ ನಮ್ಮ ಮನೆಯಲ್ಲಿ ಬೇರೆಯೇ ಡೊಂಬರಾಟ ನಡೆಯುತ್ತಿತ್ತು. ಇದರಲ್ಲಿ ಸ್ವಲ್ಪ ಭಾಗ ಅನಂತರ 'ಕಾಂತಿ ಉವಾಚ' ಗಳ ಮುಖಾಂತರ ನಮಗೆ ತಿಳಿಯಿತು. ಉಳಿದವುಗಳನ್ನು ನಾವೇ ಊಹಿಸಿಕೊಂಡೆವೆಂದುಕೊಳ್ಳಿ. ಅಲ್ಲಿ ನಮ್ಮ ಪಲಾಯನದ ವಾಸನೆ ಹಿಡಿದಿದ್ದೇ ಕಾಂತಿಯು ಚುರುಕಾದಳು, ನೆಲಕಡ್ಲೆಯನ್ನು ಒಂದೇಟಿಗೆ ಮುಕ್ಕಿ,. ಚೋಲಿಯನ್ನು ದಶದಿಕ್ಕುಗಳಿಗೆ ಹಾರಿಸಿದಳು. ಪುಗ್ಗೆಯನ್ನು ಬಡಿದು ಹೊಟ್ಟೆಸಿ ಅದರೊಳಗಿನ ನೀರನ್ನು ಚಾವಡಿಯಲ್ಲೆಲ್ಲಾ ಚೆಲ್ಲಾಡಿದಳು. ಬಟರುಗಳನ್ನು ಜಗಲಿಯಲ್ಲಿ ಕಟ್ಟಿದ್ದ ದಾಸುನಾಯಿಯ ಕಡೆಗೂ. ಹೊಸ್ತಿಲಲ್ಲಿ ಕೂತಿದ್ದ ಮಂಗುಪುಚ್ಚೆಯತ್ತಲೂ ಗುರಿಯಿಟ್ಟು ಎಸೆದಳು. ಶರ್ಬತ್ತಿನ ಅರ್ಧವನ್ನು ಗಂಟಲಿಗೂ, ಉಳಿದರ್ಧವನ್ನು ಮೈಮೇಲೂ ಸುರಿದುಕೊಂಡಳು. ಈ ಸನ್ನದ್ಧತೆಗಳೊಂದಿಗೆ

ರೊಂ...ಮ್ ಎಂದು ವಾದ್ಯ ಊದಲು ಶುರು ಮಾಡಿದಳು. ಮತ್ತೊಂದು ಗಳಿಗೆಯಲ್ಲಿ ಈ ರಗಳೆಯನ್ನು ಸುಧಾರಿಸುವಂತೆ ಅಮ್ಮನಿಂದ ಆಜ್ಞಪ್ತಳಾದ ಬ್ಯಾರ್ತಿಯ ಪ್ರವೇಶವೂ ಚಾವಡಿಗಾಯ್ತು. ಆಗ, ಬರೀ 'ಪದ' ಹೇಳಿದರೆ ಸಾಲದೆಂದುಕೊಂಡ ಕಾಂತಿ ತನ್ನ ಪಾದ ತ್ರಾಣವನ್ನೂ ಸೇರಿಸಿ ಕಥಕ್ಕಳಿ ಸೇವೆ ಮಾಡತೊಡಗಿದಳು. ಅವಳನ್ನು ಸಮೀಪಿಸುವ ಗುಂಡಿಗೆಯಿಲ್ಲದ ಬ್ಯಾರ್ತಿ ನಿಂತಲ್ಲೇ ಬೆರ್ಚಪ್ಪನಂತೆ ಸ್ಥಾವರವಾದಳು.

ಕ್ಷಣಾರ್ಧದಲ್ಲಿ ಅಮ್ಮ ''ಕಾವಲಿ ಸಟ್ಟುಗ ಶೋಭಿತೆಯಾಗಿ ಪ್ರತ್ಯಕ್ಷಳಾಗಿ '' ನಿನ್ನ ಅರ್ಗೆಂಟು ಬಂದು ಮಾಡಿ, ಅದೇನು ಬೇಕೂಂತ ಹೆಳ್ತೀಯೋ, ಇಲ್ಲ ಕೋಚಣ್ಣನನ್ನು ಕರೆಯಬೇಕೊ'' ಎಂದು ಜೋರು ಮಾಡಿದ್ದೇ ಕಾಂತಿಯ ಕೌಳಿಗೆ ಮೌನವಾಯ್ತು. ಈ ಮಹಾಬಲಿ ಕೋಚಣ್ಣ ಯಾರೂಂತ ಕೇಳ್ತೀರೋ....

ದಿನ ಬೆಳಗಾದರೆ ಬರಾಬ್ಬರಿ ಒಂದು ನೂರಾ ಎಂಟು ವಿಧ್ವಂಸಕ ಕೃತ್ಯಗಳ ನಕಾಶೆಗಳನ್ನಿಟ್ಟುಕೊಂಡು, ಅವುಗಳನ್ನು ಸಾಧ್ಯವಾದಷ್ಟು ಕಾರ್ಯಗತಗೊಳಿಸುವ ನಾನಾ ಚಟುವಟಿಕೆಗಳಲ್ಲಿ ಕಾಣೆಯಾಗುವ ನಮ್ಮಂಥ ಪೆರಪ್ಪು ಮಕ್ಕಳನ್ನು ಪಡೆದವಳಲ್ಲವೋ, ನಮ್ಮ ಅಮ್ಮ ಹಾಗಾಗಿ, ಈ ಮಕ್ಕಳ ಕೈ ಕಾಲು, ಮಂಡೆ ಮೂತಿಗಳೆಲ್ಲಾ ಸ್ವಸ್ಥಾನದಲ್ಲಿರುವ ಹಾಗೆ ನೋಡಿಕೊಂಡು ಅವರುಗಳನ್ನು ಜೀವಸಹಿತ ಮರಳಿಸಬೇಕೆನ್ನುವ ನಿವೇದನೆಯನ್ನು ಎಲ್ಲಾ ದೇವದೇವರುಗಳಿಗೂ, ದಿನನಿತ್ಯವೂ ನೆನಪಿಗೆ ತರುತ್ತಿದ್ದಳು. ಅವರ ಬೆಂಬಲಕ್ಕೆ ಬೇಕಾದರೆ ಆಯಿತೆಂದು ತನ್ನ ಸ್ಟಾಕಿನಲ್ಲಿ ಕೆಲವು 'ಶಕ್ತ್ಯಾಯುಧ'ಗಳನ್ನೂ ಕಲ್ಪಿಸಿಕೊಂಡಿದ್ದಳು. ಈ 'ಕೋಚಣ್ಣ'ನ ಹೆಸರು ಆ ಪೈಕಿಯದೇ ಆಗಿತ್ತು. ಅಮ್ಮನೂ ಬ್ಯಾರ್ತಿಯೂ ಮಾತನಾಡುತ್ತಿರುವಾಗ, ಕದ್ದು ಕೇಳಿದ್ದ ನೆಬ್ಬೀಸಾ, ಅಂಥ ಉಗ್ರವಾದಿ ಭಯೋತ್ಪಾದಕ ಧರಿತ್ರಿಯಲ್ಲಿಯೇ ಇಲ್ಲವೆಂಬ ಮಹತ್ವದ ಅಂಶವನ್ನು ಕಂಡುಹಿಡಿದಿದ್ದಳು. ಇಂಥ ಗುಪ್ತದಳದ ವರದಿಗಳನ್ನು ಕೇಳುವುದಕ್ಕೂ, ಆಂತರಿಕ ಸಭೆಗಳಲ್ಲಿ ಭಾಗವಹಿಸುವುದಕ್ಕೂ ಕಾಂತಿಗೆ ಪ್ರಾಯವೂ ಆಗಲಿಲ್ಲ, ಅನುಭವವೂ ಸಾಲದೆಂದು ನಾವು ನಿಜ ಮಾಡಿದ್ದೆವು. ಹಾಗಾಗಿ ಅವಳು 'ಕೋಚಣ್ಣ' ಎಲ್ಲಿಯಾದರೂ ಎತ್ತಿ ಮಾಡಿನ ಕೋಬಲಿನಲ್ಲಿಟ್ಟರೆ, ತಾನು ತಿನ್ನುವುದೇನನ್ನ ಎಂಬ ಭಯದಿಂದ ಅಮ್ಮನ ನಿಯಂತ್ರಣ ರೇಖೆಯೊಳಗೆ ಬರುತ್ತಿದ್ದಳು.

ಹಾಗೆ ಬಾಯಿ ಮುಚ್ಚಿದ ಆನಂತರ, ಅವರೆಲ್ಲ (ಎಂದರೆ ನಾವು) ಹೋದಲ್ಲಿಗೇ ತನಗೂ ಹೋಗಲಿಕ್ಕಿದೆಯೆಂಬ ಬೇಡಿಕೆಯನ್ನು ಅವಳು ಮಂಡಿಸುವಂಥವಳಾದಳು. ಬೇರೆ ದಾರಿ ಕಾಣದೆ, ಅವಳನ್ನು ಸೊಂಟಕ್ಕೆ ಇರುಕಿಕೊಂಡ ಬ್ಯಾರ್ತಿ ಗುಡ್ಡವನ್ನು ಹತ್ತಲೇ ಬೇಕಾಯಿತು. ಆಗಾಗ ನಿಂತು ದಣಿವಾರಿಸಿಕೊಳ್ಳುತ್ತಾ, ಸೇಂಕುತ್ತಾ ಉತ್ಸವ ಮೂರ್ತಿಯನ್ನು ಹೊತ್ತ ಪಲ್ಲಕ್ಕಿಯ ಹಾಗೆ ಈ ಬ್ಯಾರ್ತಿ, ಮೆಲ್ಲ ಮೆಲ್ಲನೆ ಬರುತ್ತಿರಬೇಕಾದರೆ. ನಾನು ಆಗಲೇ ಹೇಳಿದ ನಮ್ಮ ಊಳಿಡಾಣ ಅವಳ ಕಿವಿ ಹೊಕ್ಕಿತು. ಅವಳಿಗೆ ಹೊಟ್ಟೆಯೆಲ್ಲಾ ಬಿಸೀಯಾಗಿ ಕುಮ್ಚಟ್ಟು ಹಾರಿದರೂ ಕಾಂತಿಯನ್ನು ಹೊತ್ತು ಹಾಕಲಿಲ್ಲ, ಅದೃಷ್ಟಕ್ಕೆ....

ಹೇಗೋ ಧೈರ್ಯ ಮಾಡಿದ ಬ್ಯಾರ್ತಿ, ಈ ಸ್ವರ ವಿಕಾರದ ಉಗಮವನ್ನರಸುತ್ತಾ ಗುಂಡಿಯ ಬದಿಗೆ ಬಂದಳು. ಒಳಗೆ ನಿಲ್ಕಿದಾಗ, ಮಂಡಗೆಯೊಳಗಿನ ನೀರಡಕೆಗಳ ಹಾಗಿದ್ದ ನಾವು ಕಾಣಿಸಿಕೊಂಡೆವು ಈ ಹೊಸಾ ವಾರ್ತೆಯನ್ನು ಶೀಘ್ರಾತಿಶೀಘ್ರವಾಗಿ ಮನೆ ಮುಟ್ಟಿಸಬೇಕೆಂದರೆ, ಕಾಂತಿ ಅವಳ ಸೊಂಟದಿಂದ ಇಳಿದರೆ ತಾನೇ. ಅವಳನ್ನು ಹೊತ್ತ ಬಚ್ಚೇಲೂ ಸೇರಿ ಬ್ಯಾರ್ತಿಗೆ ಕೋಪ ಕೆದರಿತು. ಕಾಂತಿಯನ್ನು ನೆಲಕ್ಕೆ ಕುಕ್ಕಿ, ಅತ್ತಿತ್ತ ಹಂದದ ಹಾಗೆ ಅವಳ ಎರಡು ಕೈಗಳನ್ನು ಎಲೆತ್ರದ ಒಂದು ತುದಿಗೆ ಕಟ್ಟಿ, ಅದರ ಇನ್ನೊಂದು ಕೊಡಿಯನ್ನು ಕಾಸ್ರಕ್ಕನ ಬುಡಕ್ಕೆ ಬಿಗಿದಳು. ಅನಂತರ ಒಂದೋಟದಲ್ಲಿ ಮನೆಗೆ ಧಾವಿಸಿದಳು.

ವರ್ತಮಾನ ತಿಳಿದದ್ದೇ ಹಿಡಿದ ಕೆಲಸಗಳನ್ನು ಹೇಗಿದ್ದ ಹಾಗೇ ಬಿಟ್ಟು, ಅಮ್ಮ, ಅಪ್ಪ, ಅಪ್ಪಚ್ಚಿ, ಚಿಕ್ಕಮ್ಮಾದಿಗಳೆಲ್ಲ ಗುಂಡಿಯ ಸುತ್ತ ಒಗ್ಗಟ್ಟಾದರು ! ಸಿಟ್ಟಿನಿಂದ ಮೈಯೆಲ್ಲಾ ಉರಿಯುತ್ತಿದ್ದರೂ, ಜೀವಂತ ಪ್ರಾಣಿಗಳಾದ ನಮ್ಮನ್ನು ಅಲ್ಲೇ ಬಿಡುವಂತಿಲ್ಲವಲ್ಲ, ಕತ್ತಲೆ ಬೇರೆ ಕವಿಯುತ್ತಿತ್ತು, ಎಂದು ಅವರೆಲ್ಲ ಕಾರ್ಯೋನ್ಮುಖರಾದರು. ಎಂಥ ಆಗಾಧ ದರೆ, ಬರೆಯನ್ನಾದರೂ ಹತ್ತಬಲ್ಲನೆಂಬ ಪ್ರಖ್ಯಾತಿಯಿದ್ದ ಕುಂಞನಿಗೆ ಜನ ಹೋಯ್ತು. ಸ್ವಲ್ಪ ಹೆಚ್ಚೇ 'ಕಷಾಯ ಸೇವನೆ' ಮಾಡಿದ್ದ ಅವ ಬಂದದ್ದೇ ಈ ಗುಂಡಿಗೆ ಈ ಕಡೆಯಿಂದ ಇಳಿಯುವುದೋ, ಆ ಬದಿಯಿಂದಲೋ ಮೊದಾ...ಲು ನೋಡುವ ಎಂದು ಇತ್ತಿಂದತ್ತ ಜಿಗಿಯಲು ಹೋಗಿ, ಅಂದಾಜು ತಪ್ಪಿ ಬುಡಕ್ಕನೆ ಗಂಡಿಯ ತಳ ಸೇರಿದ. ಗುಂಡಿಯೊಳಗೆ ನಮ್ಮ ಜನಸಂಖ್ಯೆ ನಾಲ್ಕಕ್ಕೇರಿತು. ಹಾಗೆ ಬೀಳುವಾಗ, ಅಲ್ಲಿ ಇಲ್ಲಿ ಜರ್ಪಿದ ಜೇನೆ ನೆತ್ತಿಗೇರಿ, ಅಲ್ಲಿದ್ದ ಅಮಲಿನ ಜಾಗವನ್ನು ಚೂರು ತೆರವು ಮಾಡಿಸಿತು.

ಹೆಡ್ಡ ದೂಮನ ಹಾಗೆ ಅವನು ಸುತ್ತು ಮುತ್ತು ನೋಡುತ್ತಾ ನಾನಿಲ್ಲಿಗೆ ಹೇಗೆ ಬಂದೆ? ಎಂದು ನಮ್ಮನ್ನೇ ಕೇಳಿದ. ಅವನೇ ಬಿದ್ದ ಬಗೆಯನ್ನು ಅವನಿಗೆ ವಿವರಿಸಿದ್ದಾಯ್ತು. ಅವನು ಮತ್ತೂ ತೊದಲುತ್ತಾ '' ನೀವಿಲ್ಲಿಗೆ ಯಾಕೆ ಬಂದದ್ದು?'' ಎಂದು ವಿಚಾರಣೆಗೆ ತೊಡಗಿದ. ಆಗ ನೆಬ್ಬೀಸ ಕಣ್ಣು ಕೆಕ್ಕರಿಸಿ, '' ನಾವು ಇಲ್ಲಿ ಮದ್ದಿನ ಬೇರುಗಳನ್ನೂ, ಕೆಂದೆ ಗಡಸನ್ನೂ ಹುಡುಕುತ್ತಿದ್ದೇವೆ. ಅವು ನಿನಗೇನಾದರೂ ಕಾಣ್ತವೋ ನೋಡು, ಬಲೇ ಬಿರ್ಸ'' ಎಂದು ದಟ್ಟಿಸಿದ್ದೂ ಆಯ್ತು.

ಅಷ್ಟಿಷ್ಟು ಬುದ್ಧಿ ತಿಳಿದ ಕುಂಞ, ಒಳ್ಳೆ ಮೆಣಸು ಕೊಯ್ಯುವ ಬಿದುರಿನ ಏಣಿಯನ್ನು ಗಂಡಿಯ ಒಳಗೆ ಇಳಿಸಬೇಕೆಂಬ ಸೂಚನೆ ಕೊಟ್ಟ. ಹಾಗೇ ಮಾಡಲಾಗಿ ಆ ದರಿದ್ರದ ಕೇರ್ಪು, ನೆಲದಿಂದ ಆರಂಗುಲ ಮೇಲೆಯೇ ಅಂತರಾಳದಲ್ಲಿ ತೂಗತೊಡಗಿತು. ನಾವೆಲ್ಲಾ ಸೇರಿ, ಅದರ ಕಾಲೆಳೆದು ನೆಲಕ್ಕೆ ಊರಿ, ಅದರ ಬುಡಕ್ಕೆಲ್ಲ ಮಣ್ಣು ಮೆತ್ತಿ ಬಿಗಿ ಮಾಡಿದೆವು. ಆಗ ಮತ್ತೊಂದು ಸಮಸ್ಯೆ ಉದ್ಭವವಾಯ್ತು.

ಎಳೆ ನೇಜಿಯಷ್ಟೇ ಎತ್ತರವಿದ್ದ ಮಕ್ಕಳಾದ ನಾವು, ಮಾರಿಗೊಂದರಂತೆ ಇದ್ದ ಆ ಏಣಿಯ ಗೆಂಟುಗಳನ್ನು ಹತ್ತುವುದಾದರೂ ಹೇಗೆ?

ಈ ಕುಂಞನೆಂಬ ಚಾಣಕ್ಯನ ವಂಶಜ, ಒಂದು ತೊಟ್ಟಿಲನ್ನೂ ಒಂದು ಅಟ್ಟಿ ಗೋಣಿಗಳನ್ನು ಕೆಳಗೆ ಕಳುಹಿಸಿದರೆ ಏನಾದರೂ ಮಾಡಬಹುದು ಎಂದ. ಸರಿ, ಆ ಪದಾರ್ಥಗಳೂ ನಮ್ಮ ಸಹವಾಸಿಗಳಾದುವು. ತೊಟ್ಟಿಲಿನ ಎರಡೂ ಕಡೆಭಾರ ಸಮವಾಗಬೇಕೆಂಬ ಸಮಜಾಯಿಷಿಯನ್ನು ನೀಡಿದ ಕುಂಞ, ತೊಟ್ಟಿಲಿನ ಮುಂದೆ ಜಪಮಾಡ್ತಾ ಸುಮಾರು ಹೊತ್ತು ಕಳೆದ. ಒಂದು ಗೋಣಿಯನ್ನು ಎತ್ತುವುದೂ ಅದನ್ನು ಎಡದಿಂದ ಬಲಕ್ಕೆ ದಾಟಿಸುವುದೂ, ಮತ್ತೊಂದನ್ನು ಎಳೆಯುವುದೂ ಅದನ್ನು ಬಲದಿಂದ ಎಡಕ್ಕೆ ವರ್ಗಾಯಿಸುವುದೂ ಮಾಡುತ್ತ ಅವನ ಕಾಲಯಾಪನೆಯಾಯಿತು. ಅಂತೂ ಕಡೆಗೊಮ್ಮೆ, ನಮ್ಮನ್ನು ಭೂಗ್ರಹಕ್ಕೊಯ್ಯುವ ಕ್ಷಿಪಣಿಗೆ ಅಂತಿಮರೂಪವನ್ನು ಕೊಡಲಾಯಿತು.

ಇಷ್ಟೆಲ್ಲಾ ಆಗುವಾಗ, ಎಲ್ಲವನ್ನೂ ಒಂಥರಾ ದಿಗ್ಭ್ರಮೆಯಿಂದ ವೀಕ್ಷಿಸುತ್ತಿದ್ದ ಪಮ್ಮಿಗೂ, ನನಗೂ ಎಚ್ಚರಿಗೆಯಾಯ್ತು. ಕೂಡಲೇ ಮೊದಲ ರಥಾರೋಹಣದ ಹಕ್ಕು ಯಾರಿಗೆ ದೊರೆಯಬೇಕೆಂಬುದರ ಬಗೆಗೆ ನಮ್ಮೊಳಗೊಂದು 'ಗುರುಕ್ಷೇತ್ರ' ಮೊದಲಾಯಿತು. ಕಡೆಗೆ, ಸ್ವೇಚ್ಛೆಯಿಂದ ಉಡ್ಡಯನದ ಕೊನೆಯ ಪ್ರವಾಸಿಯ ಸ್ಥಾನವನ್ನು ಆಯ್ದುಕೊಂಡಿದ್ದ ನೆಬ್ಬೀಸಾ ಸಂಧಿವಿಗ್ರಹಿಯೂ ಆದಳು. ಅಲ್ಲೆ ಹೊರಳುತ್ತಿದ್ದ ಬಜಕ್ರೆಯೊಂದನ್ನು ಹಿಡಿದು ಅದು ಬೆನ್ನು ಮೇಲಾಗಿ ಬಿದ್ದರೆ ಪಮ್ಮಿ ಮೊದಲು ಸಾಗಬೇಕೆಂದೂ, ಮುಖ ಮೇಲಾದರೆ ನನ್ನ ಸರದಿಯು ಸುರುವೆಂದೂ ನಿಗದಿಪಡಿಸಿದಳು. ಕರಗ ಹೊತ್ತವರ ಥಂದದಿಂದ, ತೊಟ್ಟಿಲಾರೂಢರಾದ ನಮ್ಮನ್ನು ಒಬ್ಬೊಬ್ಬರನ್ನಾಗಿಯೇ ಕುಂಞ ಭೂಮಿಯ ಕಕ್ಷೆಯೊಳಗೆ ರವಾನಿಸಿದ.

ಅಲ್ಲಿ ಸೇರಿದ್ದವರ ನಿಟ್ಟುಸಿರುಗಳು, ಇಳಿ ಹೊತ್ತಿನ ತಂಪು ಗಾಳಿಗೂ, ಕೆಂಗಣ್ಣುಗಳು ನಮಗೂ ಬಿಸಿ ಮುಟ್ಟಿಸಿದುವು ! ಯಾವಾಗಲೂ, 'ಪ್ರದಕ್ಷಿಣೆಗೆ ತಕ್ಕ ದಕ್ಷಿಣೆ' ಯೆನ್ನುವ ತತ್ವಾನುಯಾಯಿಯಾಗಿರುತ್ತಿದ್ದ ನಮ್ಮ ತಂದೆಯವರು ಉದಾರವಾಗಿ ಹತ್ತು ರೂಪ್ಯಾಗಳ ಆ ಕಾಲದ, ನೆನಪಿಡಿ, ಇಡೀ ನೋಟನ್ನು ಕುಂಞನ್ನು ಕೈಗೆ ಹಾಕಿದರು ಅವನು ಖುಷಿಯಿಂದ ಕುಣಿದಾಡಿ, 'ಇನ್ನು ಇವು ಯಾವ ಗುಂಡಿಗೋ ಗಂಡಿಗೋ ಹೋಗಿ ಬೀಳಲಿ, ನೀವೇನೂ ಹೆದರಬೇಡಿ. ಮೇಲೆತ್ತಲು ನನ್ನನ್ನೇ ಕರೆಯಿರಿ.' ಎಂದು ಮುಂಗಡ ಆಶ್ವಾಸನೆಯನ್ನೂ ನೀಡಿ ಯದ್ವಾತದ್ವಾ ಕಾಲು ಹಾಕುತ್ತಾ ಗಾಡಿ ಬಿಟ್ಟ !

ಶರೀರದ ನಾನಾ ಭಾಗಗಳಲ್ಲಿ ಸಣ್ಣ ಪುಟ್ಟ ಗಡಿಗಳು, ತಲೆಯಿಂದ ಕಾಲಿನವರೆಗೂ ಬೇರೆ ಬೇರೆ ಸಾಂದ್ರತೆಗಳಲ್ಲಿ ಲೇಪನಗೊಂಡಿದ್ದ ಮಣ್ಣು ಮರಳು, ಚುಚ್ಚಿಕೊಂಡಿದ್ದ ಕಸಕಡ್ಡಿಗಳಿಂದ ಮೋಕ್ಷ ದೊರಕಿಸುವ ಮಹತ್ ಸಂಕಲ್ಪದೊಂದಿಗೆ ನಮಗೆಲ್ಲರಿಗೂ ಸಾಮೂಹಿಕ ಶುದ್ದೀಕರಣ ಕ್ರಿಯೆ ನಡೆಯಿತು. ಆದಾದ ಬಳಿಕ, ಶೋಡಷೋಪಚಾರಗಳೂ, ಕುಂಭಾಭಿಷೇಕಗಳೂ ಶತಕೋಟಿ ನಾಮಾರ್ಚನೆಗಳೂ ನಡೆದು, ನಮಗೆಲ್ಲ ಹೇಳತೀರದ ಅವಮಾನವಾಯಿತು. ಇಷ್ಟೆಲ್ಲಾ ಮಾಡಿ ಶಿಂಗಳೀಕಗಳ ಹಾಗೆ ಕೂತ ನಮ್ಮನ್ನು ನೋಡಿ, ಅಳಬೇಕೋ ನಗಬೇಕೋ ನಿಶ್ಚಯವಾಗದೆ, ಕೈಸಾಲೆಯ ಒಂದು ಬದಿಯಲ್ಲಿ ನಮ್ಮನ್ನೂ ಸ್ವಲ್ಪ ಆಚೆಗೆ ನೆಬ್ಬೀಸಾಳನ್ನೂ ಕೂರಿಸಿದ ಅಮ್ಮ, ಮೂಗಿನವರೆಗೆ ಉಣಿಸಿದ್ದು, ನಿನ್ನೆ ಮೊನ್ನೆ ನಡೆದಷ್ಟು ನಿಚ್ಚಳವಾಗಿ ನೆನಪಿದೆ, ನನಗೆ ಎಷ್ಟಾದರೂ ಅಮ್ಮ ಅಮ್ಮಾನೇ ಅಲ್ಲವಾ........!

ಮುಂಬಯಿ ಕನ್ನಡ ಲೇಖಕಿಯರ ಕಥಾ ಸಂಗ್ರಹ
'ಕತೆ ಹೇಳೇ.......' ದಿಂದ ಆಯ್ದ ಕತೆ.

# ಬೆಂಗಳೂರು ನಾಗರತ್ನಮ್ಮ

**ಕನ್ನಡದ ಶ್ರೀಮತಿ ನಾಗರತ್ನಮ್ಮ ಕಲ್ಪಿಸಿದ ಈ ದೇಗುಲ ಇಂದಿಗೂ ತಮಿಳುನಾಡಿನ ಪ್ರತಿಷ್ಠಿತ ಆರಾಧನಾ ಕೇಂದ್ರವಾಗಿದೆ. ತ್ಯಾಗರಾಜರ ಆರಾಧನೆಯಲ್ಲಿ ತಮಿಳು ಕಲಾವಿದರು ಅಲ್ಲಿ ಸೇರುವುದೇ ತಮ್ಮ ಪಾಲಿನ ಗೌರವವೆಂದು ಭಾವಿಸುತ್ತಾರೆ. ಕನ್ನಡ ಕಲಾವಿದರನ್ನು ಬೆರಳೆಣಿಕೆಯ ಸಂಖ್ಯೆಯಲ್ಲಿ ಆಹ್ವಾನಿಸಲಾಗುತ್ತದೆ. ಅಲ್ಲಿ ನಾಗರತ್ನಮ್ಮ ಅಕ್ಷರಶಃ ಮರೆಯಾಗಿದ್ದಾರೆ.**

ಕಮಲಪುಷ್ಪ ಕೆಸರಿನಲ್ಲಿ ಹುಟ್ಟಿದ್ದೇ ಆದರೂ ಭಗವದರ್ಪಣಕ್ಕೆ ಯೋಗ್ಯವೇ ಹೌದು. ದೇವದಾಸಿಯರ ಕುಲದಲ್ಲಿ ಜನ್ಮತಾಳಿದ್ದರೂ ಗಾಂಭೀರ್ಯದ ಗಣಿಯಾಗಿ, ಗಾಯನ ನರ್ತನಮಣಿಯಾಗಿ, ವಿರಾಗಿಣಿಯಾಗಿ ಇಹಲೋಕ ಜೀವನದ ಸಾರ್ಥಕತೆಯನ್ನು ಪಡೆದು ಕನ್ನಡನಾಡಿನ ಕಣ್ಮಣಿಯಂತಿದ್ದ ನಾಗರತ್ನಮ್ಮನನ್ನು ಪಡೆದ ನಮ್ಮ ನಾಡು ನಿಜಕ್ಕೂ ಭಾಗ್ಯದ ಬೀಡು. ರೂಪ, ವಿದ್ಯೆ, ಸಂಪತ್ತು - ಈ ಮೂರು ಸರಿಸಮವಾಗಿ ನಾಗರತ್ನಮ್ಮನವರಲ್ಲಿ ಮನೆಮಾಡಿಕೊಂಡಿದ್ದರೂ ಆಕೆ ವಿನಯನಿಧಿಯಾಗಿದ್ದರು.

ನಾಗಮ್ಮನವರ ಪ್ರಥಮ ಪರಿಚಯ ನನಗಾದದ್ದು ವೀಣೆ ಸುಬ್ಬಣ್ಣನವರ ಮನೆಯಲ್ಲಿ. ಶೇಷಣ್ಣ , ಸುಬ್ಬಣ್ಣ , ಕೃಷ್ಣಪ್ಪ ಮೊದಲಾದ ಹಿರಿಯ ವಿದ್ವಾಂಸರೆದುರು ಆಳುದ್ದ ದೇಹವನ್ನು ಗೇಣುದ್ದ ಮಾಡಿಕೊಂಡು ಅವರ ಪಾದಗಳಿಗೆ ಸರ್ವಸ್ವವನ್ನೂ ಸಮರ್ಪಣೆ ಮಾಡಬಯಸುವ ಭಾವಭಂಗಿಯಲ್ಲಿ ನಿಲ್ಲುತ್ತಿದ್ದ ಆಕೆಯ ಆಕೃತಿ ಇಂದಿಗೂ ಕಣ್ಣಿಗೆ ಕಟ್ಟಿದಂತಿದೆ ನನಗೆ. ಹಿರಿಯರನ್ನು ಕಣ್ಣೆತ್ತಿ ಸಹ ನೋಡುತ್ತಿರಲಿಲ್ಲ ಆಕೆ. ಇಂಪಿನ ಕೊರಳಿನಿಂದ ಹೊರ ಬೀಳುತ್ತಿದ್ದ ಆಕೆಯ ಮಿತವಾದ ಮಾತು ಮುತ್ತಿಗಿಂತ ನಯ. ಆಕೆಯ ಸೌಂದರ್ಯ ರಾಶಿಯ ಹಿಂದಡಗಿದ್ದ ಅಪೂರ್ವ ಕಾಂತಿಯೊಂದು ನೋಡುಗರಲ್ಲಿ ಪೂಜ್ಯ ಭಾವನೆಯನ್ನುಂಟು ಮಾಡುತ್ತಿತ್ತು.

ನಂಜನಗೂಡಿನ ವಕೀಲ್ ಸುಬ್ಬರಾಯರ ಆಶ್ರಯದಲ್ಲಿ ಬೆಳೆದವರು ನಾಗರತ್ನಮ್ಮ ಹಾಗೂ ಅವರು ತಾಯಿ. ಬಾಲ್ಯದಲ್ಲಿಯೇ ಹುಡುಗಿಯ ಕಲಾಭಿರುಚಿಯನ್ನು ಕಂಡುಕೊಂಡ ವಕೀಲರು ಕಲಾಕುಸುಮವನ್ನು ವಿಕಸನಗೊಳಿಸುವ ಉದ್ದೇಶದಿಂದ ಮೈಸೂರಿಗೆ ಅವರನ್ನು ಕರೆತಂದರು. ಬಿಡಾರಂ ಕೃಷ್ಣಪ್ಪ ಹಾಗೂ ಆಸ್ಥಾನ ಕವಿ ಗಿರಿಭಟ್ಟರ ತಮ್ಮಯ್ಯನವರಲ್ಲಿ ನಾಗರತ್ನಮ್ಮನ ವ್ಯಾಸಂಗ ಪ್ರಾರಂಭವಾಯಿತು. ತಮ್ಮಯ್ಯ ಸಂಗೀತ ಮತ್ತು ಸಾಹಿತ್ಯಗಳಲ್ಲಿ ಗಣ್ಯ ವಿದ್ವಾಂಸರು. ಮೈಸೂರು ಅರಮನೆಯ ಶಾಕುಂತಲ ನಾಟಕ ಸಭೆಯ ಶಿಕ್ಷಕರಾಗಿದ್ದರು. ಇವರ ಬಳಿ ಒಂದೆರಡು ವರ್ಷಗಳ ಕಾಲ ಸಂಗೀತ, ನರ್ತನ ಹಾಗೂ ಕನ್ನಡ ಸಾಹಿತ್ಯವನ್ನು ಅಧ್ಯಯನ ಮಾಡಿದರು ನಾಗರತ್ನಮ್ಮ. ತಮ್ಮಯ್ಯ ಹೊಸದಾಗಿ ಕಲಾಮೂರ್ತಿಯನ್ನೇನೂ ಕಡೆಯ ಬೇಕಾಗಿರಲಿಲ್ಲ. ದೈವದತ್ತವಾದ ಮೂರ್ತಿಗೆ ಶೃಂಗಾರ ಮಾಡುವ ಕೆಲಸ ಮಾತ್ರ ಉಳಿದಿತ್ತು ಅಷ್ಟೆ. ಆದುದರಿಂದಲೇ ನಾಗರತ್ನಮ್ಮನ ವಿದ್ಯಾರ್ಜನೆ ಹೂವಿನ ಸರ ಎತ್ತಿದಷ್ಟು ಹಗುರವಾಗಿಯೂ ತ್ವರಿತವಾಗಿಯೂ ಸಾಗಿತು.

ಅಲ್ಲಿಂದ ಮುಂದೆ ಬೆಂಗಳೂರಿನಲ್ಲಿದ್ದ ತನ್ನ ಸೋದರಮಾವಂದಿರಾದ ಪಿಟೀಲು ವೆಂಕಟಸಾಮಪ್ಪನವರಲ್ಲಿ ಸಂಗೀತಾಭ್ಯಾಸವನ್ನು ಮುಂದುವರಿಸಿದರು ನಾಗರತ್ನಮ್ಮ. ವಿದ್ವಾಂಸರ ಮತ್ತು ರಸಿಕರ ಗೌರವಾದರಗಳಿಗೆ ಪಾತ್ರರಾದರು. ಪ್ರಭುಗಳ ಕೃಪಾಕಟಾಕ್ಷ ದೊರಕಲೂ ಹೆಚ್ಚು ಕಾಲ ಬೇಕಾಗಲಿಲ್ಲ.

ನಾಗರತ್ನಮ್ಮನವರಿಗೆ ಇನ್ನೂ ಹೆಚ್ಚಿನ ಪಾಂಡಿತ್ಯವನ್ನು ಸಂಪಾದಿಸಬೇಕೆಂಬ ಹಿರಿಯಾಸೆಯಾಗಿ ಮದ್ರಾಸಿಗೆ ಪ್ರಯಾಣ ಬೆಳೆಸಿದರು. ಪ್ರಖ್ಯಾತ ವಿದ್ವಾಂಸರ ಕಛೇರಿಗಳನ್ನು ಕೇಳಿ ವಿಷಯಸಂಗ್ರಹ ಮಾಡಿಕೊಂಡರು. ಸಂಗ್ರಹ ಮಾಡಿದುದನ್ನು ಸಾಧಿಸಿ ತಮ್ಮ ವಿದ್ಯೆಯನ್ನು ಪರಿಪಕ್ವ ಮಾಡಿಕೊಂಡರು. ಅವರ ಸಂಗೀತ ಜ್ಞಾನ ಒಂದಕ್ಕೆ ಹತ್ತರಷ್ಟಾಯಿತು.

ತ್ಯಾಗರಾಜರ ಕೀರ್ತನೆಗಳೆಂದರೆ ನಾಗರತ್ನಮ್ಮನಿಗೆ ಬಲು ಅಕ್ಕರೆ. ಸಾಹಿತ್ಯಭಾವವನ್ನು ಸಂಪೂರ್ಣಗ್ರಹಿಸಿ ಚಿತ್ತಾಕರ್ಷಕ ಶೈಲಿಯಲ್ಲಿ ಹಾಡುತ್ತಿದ್ದರು. ಅವರು ದೀಕ್ಷಿತರ ಕೃತಿಗಳನ್ನು ಹಾಡಿದ್ದೇ ವಿರಳ. ಒಮ್ಮೆ ಆಕೆಯ ಮಿತ್ರರೊಬ್ಬರು ''ದೀಕ್ಷಿತರ ಕೀರ್ತನೆಗಳನ್ನು ನೀವೇಕೆ ಅಷ್ಟಾಗಿ ಹಾಡುವುದಿಲ್ಲ?'' ಎಂದು ಕೇಳಿದರು. ''ದೀಕ್ಷಿತರ ಕೀರ್ತನೆಗಳನ್ನು ಸಾಹಿತ್ಯವನ್ನು

ಅರ್ಥ ಮಾಡಿಕೊಂಡು ಪದಗಳನ್ನೂ ಅಕ್ಷರಗಳನ್ನೂ ಸ್ಪಷ್ಟವಾಗಿ ಉಚ್ಚರಿಸುವುದು ಸುಲಭಸಾಧ್ಯವಲ್ಲ. ಆಳವಾದ ಸಾಹಿತ್ಯಜ್ಞಾನ ಅತ್ಯಾವಶ್ಯಕ. ಹೇಳಿಕೊಟ್ಟಿದ್ದನ್ನು ಗಿಳಿಯ ಪಾಠದಂತೆ ಹಾಡಿ ಒಪ್ಪಿಸುವುದು ಹೆಚ್ಚಿನದಲ್ಲ. ನನಗೆ ಸಂಸ್ಕೃತ ಭಾಷೆಯ ಪರಿಚಯ ಅಷ್ಟಾಗಿಲ್ಲ. ತಿಳಿಯದ ವಿಷಯಕ್ಕೆ ಕೈಹಾಕಿ ಕೀರ್ತನೆಗೂ ಅದರ ಕರ್ತೃವಿಗೂ ದ್ರೋಹ ಮಾಡುವುದು ನನಗೆ ಇಷ್ಟವಿಲ್ಲ. '' ಎಂದು ಪ್ರತ್ಯುತ್ತರವಿತ್ತರು ನಾಗರತ್ನಮ್ಮ. ಕನ್ನಡ ದೇವರ ನಾಮಗಳನ್ನೂ ತ್ಯಾಗಯ್ಯನವರ ಕೀರ್ತನೆಗಳನ್ನೂ ಭಾವಗರ್ಭಿತವಾಗಿ ಹಾಡಿ ಜನಾದರಣೀಯವನ್ನಾಗಿ ಮಾಡಲು ಶ್ರಮಿಸಿದರು. ಮದ್ರಾಸಿನಲ್ಲಿ ಸಹ ನಾಗರತ್ನಮ್ಮನವರ ಹೆಸರು ಮೂಲೆ ಮೂಲೆಗೂ ಹಬ್ಬಿತು.

ಹೀಗಿರುವಲ್ಲೊಂದು ದಿನ ವಿಚಿತ್ರ ಪ್ರಸಂಗವೊಂದು ಜರುಗಿತು. ಅಂದು ತ್ಯಾಗಯ್ಯನವರ ಆರಾಧನೆಯ ದಿನ. ನಾಗರತ್ನಮ್ಮ ಭಕ್ತಿಪುರಸ್ಸರದಿಂದ ಅಯ್ಯನವರ ಪೂಜೆ ಕೈಗೊಂಡರು. ನಾಲ್ಕಾರು ಕೀರ್ತನೆಗಳನ್ನು ಹಾಡಿ ಗಾನ ಸೇವೆಯನ್ನು ಸಲ್ಲಿಸಿದರು. ರಾತ್ರಿ ಊಟ ಮಾಡದೆಯೆ ಪ್ರಸಾದರೂಪವಾದ ಹಾಲು ಹಣ್ಣನ್ನು ಮಾತ್ರ ಸೇವಿಸಿ ಮಲಗಿದರು. ಎಂದೂ ಇಲ್ಲದ ಪ್ರಶಾಂತತೆ, ಗಂಭೀರತೆಯೊಂದು ಅವರ ಮನವನ್ನಾವರಿಸಿತ್ತು ಆ ದಿನ. ತ್ಯಾಗರಾಜರ ಪುಣ್ಯಜೀವನದ ಒಂದೊಂದು ಘಟನೆಯೂ ಕಣ್ಮುಂದೆ ಸುಳಿದು ನಾಗರತ್ನಮ್ಮನಿಗೆ. ರೋಮಾಂಚನವಾಯಿತು. ರಾತ್ರಿ ಸುಮಾರು ಒಂದು ಘಂಟೆಯ ಸಮಯ. ತೇಜಃ ಪುಂಜರಾದ ವೃದ್ಧರೊಬ್ಬರು ಬಂದು ನಾಗರತ್ನಮ್ಮನವರನ್ನು ನಿದ್ದೆಯಿಂದ ಎಬ್ಬಿಸಿದಂತಾಯಿತು. ''ತಾಯಿ, ನಿನ್ನ ಭಕ್ತಿ ಪೂಜೆಯಿಂದ ರಾಮಚಂದ್ರ ತೃಪ್ತನಾಗಿದ್ದಾನೆ. ತಿರುವಯ್ಯಾರಿನಲ್ಲಿ ತ್ಯಾಗರಾಜರ ಬೃಂದಾವನದ ಬಳಿ ಒಂದು ಮಂಟಪವನ್ನು ಕಟ್ಟಿಸಿ ವರ್ಷವರ್ಷವೂ ಭಕ್ತಶ್ರೇಷ್ಠರು ಬಂದು ಸೇರಿ ರಾಮನಾಮ ಸಂಕೀರ್ತನವನ್ನು ಮಾಡಲು ಅವಕಾಶವನ್ನು ಕಲ್ಪಿಸಿ ಪುಣ್ಯಶಾಲಿನಿಯಾಗು'' ಎಂದು ಹೇಳಿ ಆ ವ್ಯಕ್ತಿ ಅದೃಶ್ಯವಾಯಿತಂತೆ. ನಾಗರತ್ನಮ್ಮನಿಗೆ ಮೈ ಪುಳಕಿತವಾಯಿತು. ಆ ಮಹತ್ಕಾರ್ಯ ಸಾಧನೆಗಾಗಿ ತನ್ನ ಇಡೀ ಜೀವಮಾನವನ್ನೇ ಮುಡುಪಾಗಿಟ್ಟಳು ಆ ಮಹಾತಾಯಿ ! ಮಾರನೆಯ ದಿನವೇ ಮದ್ರಾಸಿಗೆ ತೆರಳಿ ಸಂಬಂಧಪಟ್ಟ ಅಧಿಕಾರಿಗಳನ್ನೂ ಪುರಪ್ರಮುಖರನ್ನೂ ಕಂಡು ಮಾತುಕತೆ ನಡೆಸಿ ಪುಣ್ಯಕೆಲಸದ ಅಂಕುರಾರ್ಪಣೆ ಮಾಡಿದರು. ಕೆಲಸಕಾರ್ಯಗಳ ಮೇಲ್ವಿಚಾರಣೆಯನ್ನು ಖುದ್ದಾಗಿ ಪರಿಶೀಲಿಸುವ ಉದ್ದೇಶದಿಂದ ಮದ್ರಾಸಿನಲ್ಲಿಯೇ ನೆಲೆಸಿದರು.

ಸ್ಥಳ-ಪರಸ್ಥಳಗಳಲ್ಲಿ ನಾಗರತ್ನಮ್ಮನವರ ಕಛೇರಿಗಳಾದವು. ಸಂಗ್ರಹವಾದ ಧನವನ್ನೆಲ್ಲ ತಮ್ಮ ಕನಸನ್ನು ನನಸಾಗಿಸಲು ಕೂಡಿಟ್ಟರು. ಹಗಲಿರುಳೂ ದೇವಬ್ರಾಹ್ಮಣರ ಪೂಜೆ, ರಾಮಾಯಣಶ್ರವಣ,. ಸಂಗೀತಾರಾಧನೆ ನಡೆಸುತ್ತ ಕಾರ್ಯಾರಂಭದ ಸುದಿನವನ್ನು ಇದಿರುನೋಡುತ್ತಿದ್ದರು.

ಕೊನೆಗೊಂದು ದಿನ ಕಾಲಹರಣ ಮಾಡದೆಯೆ ಒಡನೆಯೇ ಕಟ್ಟಡದ ಕೆಲಸವನ್ನು ಪ್ರಾರಂಭಿಸಬೇಕೆಂಬ ಆಸೆಯಾಯಿತು ನಾಗರತ್ನಮ್ಮನವರಿಗೆ. ಆದರೆ ಬೇಕಾಗಿದ್ದ ಮೊಬಲಗಿಗಿಂತ ಶೇಖರವಾಗಿದ್ದ ಹಣ ಕಡಿಮೆಯಾಗಿದ್ದಿತು. ಧೈರ್ಯಗೆಡಲಿಲ್ಲ ನಾಗರತ್ನಮ್ಮ ಜೀವನದಲ್ಲಿ ಅನುಭವಿಸಬೇಕಾಗಿದ್ದ ಸುಖಾಭಿಲಾಷೆಗಳನ್ನೆಲ್ಲ ತೊರೆದಿದ್ದರು ಆಕೆ. ಹುಟ್ಟಿದ್ದ ಒಂದೆರಡು ಮಕ್ಕಳೂ ಮೃತಿಹೊಂದಿದ್ದರಿಂದ ನಾಗರತ್ನಮ್ಮ ವಿರಕ್ತರಾಗಿದ್ದರು. ತಮ್ಮ ಮನೆಯನ್ನು ಮಾರಿ ಬಂದ ಮೂವತ್ತು ಸಹಸ್ರ ರೂಪಾಯಿಗಳನ್ನು ನಿಧಿಗೆ ಸೇರಿಸಿದರು. ಆಪಾದಮಸ್ತಕವೂ ಇದ್ದ ತಮ್ಮ ಅಮೂಲ್ಯ ಆಭರಣಗಳನ್ನೆಲ್ಲ ಮಾರಿ ಬಂದ ಹಣವನ್ನು 'ಕೃಷ್ಣಾರ್ಪಣ' ಎಂದರು. ತ್ಯಾಗರಾಜ ಕ್ಷೇತ್ರದಲ್ಲಿ ಕಟ್ಟಡದ ನಿರ್ಮಾಣ ಕಾರ್ಯ ಪ್ರಾರಂಭವಾಯಿತು. ಭಕ್ತಳು ಪವಿತ್ರಮನಸ್ಸಿನಿಂದ ಪ್ರಾರಂಭ ಮಾಡಿದ ಪುಣ್ಯ ಕಾರ್ಯಕ್ಕೆ ಜನಸಹಾಯ ತಾನೇತಾನಾಗಿ ಒದಗಿ ಬಂದಿತು. ಕಟ್ಟಡ ಮುಗಿದಂದು ನಾಗರತ್ನಮ್ಮನವರಿಗಾದ ಆನಂದ ಸಂಭ್ರಮಗಳಿಗೆ ತುದಿ ಮೊದಲಿರಲಿಲ್ಲ. ''ಇನ್ನು ಯಾವ ಘಳಿಗೆಯಲ್ಲಿ ಬೇಕಾದರೂ ಪ್ರಾಣತ್ಯಾಗ ಮಾಡಲು ಸಿದ್ಧ ನಾನು'' ಎನ್ನುತ್ತಿದ್ದರು ನಾಗರತ್ನಮ್ಮ.

ವರ್ಷವರ್ಷವೂ ದೇಶದ ನಾನಾ ಮೂಲೆಗಳಿಂದ ತಿರುವಯ್ಯಾರಿಗೆ ಬಂದು ಸೇರುವ ಭಕ್ತಾಗ್ರಣಿಗಳು ಇಂದಿಗೂ ನಾಗರತ್ನಮ್ಮನ ಪವಿತ್ರ ಜೀವನವನ್ನು ಕೃತಜ್ಞತೆಯಿಂದಲೂ ಗೌರವದಿಂದಲೂ ಸ್ಮರಿಸುತ್ತಾರೆ.

ಈ ಮಹತ್ಕಾರ್ಯಸಾಧನೆಯಾದ ಬಳಿಕ ನಾಗರತ್ನಮ್ಮ ಒಮ್ಮೆ ಬೆಂಗಳೂರಿಗೆ ಬಂದರು. ಕನ್ನಡಿಗರ ಹೆಸರಾಗಿ 'ಮೈಸೂರು ಛತ್ರ'ವೊಂದನ್ನು ತಿರುವಯ್ಯಾರಿನಲ್ಲಿ ಕಟ್ಟಿಸಿ ವರ್ಷಂಪ್ರತಿ ಹತ್ತು ಮಂದಿ ವಿದ್ಯಾರ್ಥಿಗಳಿಗೆ ಪ್ರೌಢ ಸಂಗೀತ ಶಿಕ್ಷಣ ದೊರೆಯುವಂತೆ ಏರ್ಪಡಿಸಬೇಕೆಂಬ ಉದ್ದೇಶದಿಂದ. ಆರ್ಕಾಟು ರಾಮಸ್ವಾಮಿ ಮೊದಲಿಯಾರ್ ಅವರ ದಿವಾನಗಿರಿಯ ಕಾಲ ಅದು. ಆಪ್ತಮಿತ್ರರಲ್ಲಿ ತಮ್ಮ ಉದ್ದೇಶವನ್ನು ತಿಳಿಯ ಪಡಿಸಿದರು. ಧನಸಂಗ್ರಹಕ್ಕಾಗಿ ಕಛೇರಿಗಳನ್ನು ಮಾಡಿದರು. ಸುಮಾರು ಆರು ಸಹಸ್ರ

ರೂಪಾಯಿಗಳಷ್ಟು ಹಣ ಒದಗಿತು. ನಾಗಮ್ಮನವರ ಮುಖ ಕಿರಿದಾಯಿತು. ಆಕೆಯ ಇಂಗಿತವನ್ನರಿತ ಚಿರಪರಿಚಿತರೊಬ್ಬರು ನಾಗರತ್ನಮ್ಮನವರನ್ನು ಪ್ರಶ್ನಿಸಿದರು; '' ನೀವು ಪಟ್ಟ ಇಷ್ಟು ಶ್ರಮಕ್ಕೆ ಅಲ್ಪ ಪ್ರತಿಫಲ ದೊರಕಿದ್ದರಿಂದ ನಿಮ್ಮ ಮನಸ್ಸಿಗೆ ಬೇಸರವಾಗಿರುವುದು ಸಹಜ. ಮದ್ರಾಸಿನಲ್ಲಿಯೇ ನೀವು ಇಷ್ಟು ಪ್ರಯತ್ನಸಿದ್ದರೆ ಇದಕ್ಕೆ ನಾಲ್ಕರಷ್ಟು ಹಣ ಶೇಖರಣೆಯಾಗುತ್ತಿತ್ತಲ್ಲ?'' ಎಂದು. ನಾಗರತ್ನಮ್ಮ ನಕ್ಕು ನುಡಿದರು : '' ಈ ಅಲ್ಪ ಆರು ಸಹಸ್ರ ರೂಪಾಯಿಗಳನ್ನು ಅರೆಕ್ಷಣದಲ್ಲಿ ಕೇವಲ ಒಬ್ಬ ಧನಿಕನಿಂದ ಪಡೆಯಬಲ್ಲೆ ಮದ್ರಾಸಿನಲ್ಲಿ. ಆದರೆ ನನ್ನ ಉದ್ದೇಶವೇ ಬೇರೆ. ಕನ್ನಡಿಗರಿಗಾಗಿ ಕೈಗೊಂಡ ಕಾರ್ಯಕ್ಕೆ ಕನ್ನಡೇತರರ ಕೊಂಕಿರಬಾರದು'' ಎಂದು. ಕನ್ನಡ ನುಡಿಯ ಮೇಲೆ, ಕನ್ನಡಿಗರ ಮೇಲೆ, ಅಷ್ಟು ಅಭಿಮಾನ, ಅಷ್ಟು ಮಮತೆ ಆಕೆಗೆ.

'ಮೈಸೂರು ಛತ್ರ'ದ ಕಟ್ಟಡದ ಕೆಲಸ ಪೂರೈಸುವುದರೊಳಗಾಗಿ ನಾಗರತ್ನಮ್ಮನವರ ಭೌತಿಕ ದೇಹ ನಮ್ಮಿಂದ ಕಣ್ಮರೆಯಾಯಿತು. ಆಗ ಅವರ ವಯಸ್ಸು ಸುಮಾರು ಎಂಭತ್ತು.

ನಾಗರತ್ನಮ್ಮನವರದು ಕಟ್ಟುಬಿಕ್ಕಟ್ಟಿನ ಸಂಗೀತ. ಖಚಿತವಾದ ಲಯ ಜ್ಞಾನ. ಅವರ ಶಾರೀರದ ಒಂದು ಅಪೂರ್ವ ಲಕ್ಷಣವೆಂದರೆ ಹೆಂಗಸಿನ ಶಾರೀರದ ಮಾಧುರ್ಯ, ಗಂಡಸಿನ ಶಾರೀರದ ಗಾಂಭೀರ್ಯ-ಎರಡೂ ಅದರಲ್ಲಿ ಮಿಲನವಾಗಿದ್ದವು. ಸಂಗೀತಶಾಸ್ತ್ರಾಧ್ಯಯನದ ಜೊತೆಯಲ್ಲಿಯೇ ನಾಟ್ಯ ಮತ್ತು ಅಭಿನಯ ಶಾಸ್ತ್ರಗಳ ಪರಿಚಯವೂ ಸಾಗಿದ್ದರಿಂದ ಆಕೆಯ ಸಂಗೀತ ಭಾವ ಭರಿತವಾಯಿತು.

ನಾಗರತ್ನಮ್ಮನವರ ಕಛೇರಿಗಳಲ್ಲಿ ಸ್ವರಕಲ್ಪನೆಗಿಂತ ರಾಗಾಲಾಪನೆಗೆ ಪ್ರಾಮುಖ್ಯತೆ ಹೆಚ್ಚು. ಯದುಕುಲಕಾಂಬೋಧಿಯನ್ನು ಹಾಡದೇ ಇದ್ದ ಕಛೇರಿಗಳೇ ಅಪರೂಪ. ಆ ರಾಗದಲ್ಲಿ 'ಶ್ರೀರಾಮ ಜಯರಾಮ' ಎಂಬ ಕೃತಿಯನ್ನು ಬಲು ಸೊಗಸಾಗಿ ಹಾಡುತ್ತಿದ್ದರು. 'ನಿತ್ಯ ಕಲ್ಯಾಣಿ' ಎಂಬ ರಾಗಮಾಲಿಕೆಯನ್ನು ಜನಪ್ರಿಯವನ್ನಾಗಿ ಮಾಡಿದವರೇ ನಾಗರತ್ನಮ್ಮ. 'ಭಕ್ತಾಪಾಯ ಭುಜಂಗ ಗಾರುಡಮಣಿಃ', 'ಶತ್ರುಚ್ಛೇದೈಕಮಂತ್ರಂ' ಇವೇ ಮೊದಲಾದ ಮುಕುಂದಮಾಲಾ ಶ್ಲೋಕಗಳನ್ನೂ ದೇವರನಾಮಗಳನ್ನೂ ಹಾಡುವುದರಲ್ಲಿ ನಾಗರತ್ನಮ್ಮನವರದೇ ಒಂದು ಶೈಲಿ, ಒಂದು ವೈಖರಿ. ಸಂಗೀತದಲ್ಲಿ ಖಚಿತವಾದ ಪಾಂಡಿತ್ಯವಿದ್ದುದರಿಂದ ವಿದ್ವಾಂಸರ ಯಾವ ಸವಾಲಿಗೂ ಹಿಂದುಮುಂದು ನೋಡುತ್ತಿರಲಿಲ್ಲ.

ನಾಗರತ್ನಮ್ಮನವರ ಹಲವಾರು ಕಛೇರಿಗಳನ್ನು ಕೇಳುವ ಸುಯೋಗ ನನಗೆ ದೊರೆತಿದ್ದಿತು. ಜಡ್ಜ್ ನರಹರಿರಾಯರು, ಚೀಫ್ ಜಡ್ಜ್ ಚಂದ್ರಶೇಖರಯ್ಯನವರು, ಪುಟ್ಟಣ್ಣಶೆಟ್ಟರು ಇವರೇ ಮೊದಲಾದ ಕಲಾಭಿಜ್ಞರು ನಾಗರತ್ನಮ್ಮನವರ ಕಛೇರಿಗಳನ್ನು ಆಗಿಂದಾಗ್ಗೆ ಏರ್ಪಡಿಸಿ ಉತ್ತೇಜನ ನೀಡುತ್ತಿದ್ದರು. ವೀಣೆ ಸುಬ್ಬಣ್ಣನವರ ಮನೆಯಲ್ಲಿ ಆಕೆ ಅನೇಕ ಸಾರಿ ಹಾಡಿದ್ದರು.

ಈ ಎಲ್ಲ ಸನ್ನಿವೇಶಗಳೂ ನನಗೆ ಜ್ಞಾಪಕವಿದ್ದಾಗ್ಯೂ ಮದ್ರಾಸಿನಲ್ಲಿ ನಾನೊಮ್ಮೆ ಅವರ ಮನೆಗೆ ಹೋಗಿದ್ದ ಸಂದರ್ಭ ಮಾತ್ರ ನನ್ನ ಮನಸ್ಸಿನಲ್ಲಿ ಕದಲದೆ ನಿಂತಿದೆ. ಬಲು ವಿಶ್ವಾಸದಿಂದ ನಾಗರತ್ನಮ್ಮ , ನನ್ನನ್ನು ಬರಮಾಡಿಕೊಂಡರು. ಅವರು ವ್ಯಾಸಂಗ ಮಾಡುತ್ತಿದ್ದ ಕೊಠಡಿಗೆ ಹೋದೊಡನೆಯೆ ಮೂಲೆಯಲ್ಲಿ ಒರಗಿಸಿಟ್ಟಿದ್ದ ತಂಜಾವೂರು ತಂಬೂರಿಯೊಂದರ ಮೇಲೆ ನನ್ನ ದೃಷ್ಟಿ ಬಿದ್ದಿತು. ನನ್ನ ಇಂಗಿತವನ್ನರಿತ ನಾಗರತ್ನಮ್ಮ ತಂಬೂರಿಯನ್ನು ನನ್ನ ಮುಂದಿಟ್ಟರು. ತಂಬೂರಿಯ ಕಾಯಿ, ದಂಡಿ, ಬಿರುಡೆಗಳನ್ನೊಳಗೊಂಡ ತುದಿ - ಹೀಗೆ ಮೂರು ಭಾಗಗಳನ್ನು ಬೇರೆಬೇರೆಯಾಗಿ ಮಾಡಿ ಮತ್ತೆ ಒಂದುಗೂಡಿಸಿ ತೋರಿಸಿದರು. ಪರಸ್ಥಳಗಳಿಗೆ ಹೋಗುವಾಗ ಜೊತೆಯಲ್ಲಿ ತೆಗೆದುಕೊಂಡು ಹೋಗಲು ಅನುಕೂಲವಾಗಿರಲೆಂದು ಈ ರೀತಿ ಮಾಡಿಸಿದ್ದೇನೆಂದರು. ಸೊಗಸಾದ ತಂಬೂರಿ, ಕೈಗೆ ತೆಗೆದುಕೊಂಡು ಶ್ರುತಿಮಾಡಿದೆ. ಶುದ್ಧವಾದ ತುಂಬುನಾದವನ್ನು ಕೆಲನಿಮಿಷಗಳ ಕಾಲ ಇಬ್ಬರೂ ಕೇಳಿ ಆನಂದಿಸಿದೆವು. ''ನಿಮ್ಮ ಹಾಡುಗಾರಿಕೆಯನ್ನು ಕೇಳಿ ಬಹುದಿನಗಳಾದವು. ಸ್ವಲ್ಪ ಏನಾದರೂ ಹಾಡಬಹುದಲ್ಲ?'' ಎಂದೆ. ''ಸೂರ್ಯನಿಗೆ ದೀಪೋತ್ಸವವೇ?'' ಎಂದರು. '' ಬಲದೊಡ್ಡ ಮಾತು'' ಎಂದೆ. '' ಸರಿ, ತಮ್ಮ ಚಿತ್ತ'' ಎಂದು ನಾಗರತ್ನಮ್ಮ ಹಾಡಲುಪಕ್ರಮಿಸಿದರು. ಮೈಸೂರು ಸದಾಶಿವರಾಯರ ಕಮಾಚ್ ರಾಗದ ಕೀರ್ತನೆ ' ಪರಮಾದ್ಭುತ ಮೈನ' ಎಂಬುದರಿಂದ ಅಂದಿನ ಸಂಗೀತ ಪ್ರಾರಂಭವಾಯಿತು. ಕೀರ್ತನೆಯೇ ಮುದ್ದಾದ ರಚನೆ. ನಾಗರತ್ನಮ್ಮ ಸುವರ್ಣಪುಷ್ಪಕ್ಕೆ ಸುಗಂಧ ಸೇರಿಸಿದಂತೆ ಮನೋಹರವಾಗಿ ಹಾಡಿದರು. ಸದಾಶಿವರಾಯರ ಕೀರ್ತನೆಗಳನ್ನು ಹಾಡುವುದು ಅಷ್ಟು ಸುಲಭಸಾಧ್ಯವಲ್ಲ. ಶಿಸ್ತಿನ ಅಭ್ಯಾಸಬಲದಿಂದ ಮಾತ್ರ ಸಾಧ್ಯ. ನಾಗರತ್ನಮ್ಮನವರ ಅಂದಿನ ಹಾಡಿಕೆ ಪರಿಶುದ್ಧವಾಗಿತ್ತು, ಹೃದಯಂಗಮವಾಗಿತ್ತು.

– ವಿದ್ವಾನ್ ಮೈಸೂರು ವಾಸುದೇವಾಚಾರ್ಯರ
' ನಾಕಂಡ ಕಲಾವಿದರು' ಪುಸ್ತಕದಿಂದ ಆಯ್ದ ಲೇಖನ.

# ಹಗ್ಗ ಹರಿಯುವವರೆಗೆ ಜಗ್ಗಬಾರದು

ಜೀವನದಲ್ಲಿ ಕ್ರೌರ್ಯಕ್ಕೆ ಸ್ಥಾನವಿಲ್ಲ, ಇರಕೂಡದು. ಅಂತೆಯೇ ಪ್ರತಿದೇಶದಲ್ಲಿಯೂ ಕ್ರೌರ್ಯದ ನಡವಳಿಕೆಯನ್ನು ವಿವಾಹ ವಿಚ್ಛೇದನದ ಒಂದು ಕಾರಣವನ್ನಾಗಿ ಮಾನ್ಯ ಮಾಡಿದ್ದಾರೆ. ಹಿಂದೂ ವಿವಾಹ ಅಧಿನಿಯಮದ ಪ್ರಕಾರ ಕ್ರೌರ್ಯದ ನಡವಳಿಕೆ ಅಸಾಧುವಾದುದು. ಪತಿಯು ವಿವಾಹದ ನಂತರ ಪತ್ನಿಯನ್ನು ಕ್ರೌರ್ಯದಿಂದ ನಡೆಸಿಕೊಂಡರೆ ಅದು ಪತ್ನಿಗೆ ನ್ಯಾಯಾಲಯದ ಮುಂದೆ ವಿವಾಹ ವಿಚ್ಛೇದನ ಕೋರಲು ಒಂದು ಕಾರಣವಾಗುತ್ತದೆ. ಈ ಶಾಸನದಲ್ಲಿ 'ಕ್ರೂರ ನಡವಳಿಕೆ ಅಥವಾ ಹಿಂಸೆ' ಎನ್ನುವುದನ್ನು ವಿವರಿಸಿಲ್ಲ. 1976ರ ತಿದ್ದುಪಡಿಗೆ ಮೊದಲು, ಪತಿಯ ಜೊತೆಗೆ ಇರುವುದರಿಂದ ತನಗೆ ಕೇಡು, ಅಪಾಯ ಸಂಭವಿಸುತ್ತದೆ ಎಂದು ಪತ್ನಿಗೆ ಭಯ ಉಂಟಾಗುವ ರೀತಿಯಲ್ಲಿ ಪತಿ ಅವಳ ಬಗ್ಗೆ ಕ್ರೌರ್ಯದಿಂದ ನಡೆದುಕೊಂಡರೆ ಅದು ಪ್ರತ್ಯೇಕ ವಾಸದ ಬಗ್ಗೆ ನ್ಯಾಯಾಲಯದಿಂದ ಡಿಕ್ರಿ ಪಡೆಯಲು ಅವಕಾಶ ಕೊಡುತ್ತಿತ್ತು. ಆದ್ದರಿಂದ, ಕ್ರೂರ ನಡವಳಿಕೆ, ಹಿಂಸೆ ಎಂದರೆ ಪತ್ನಿಯ ಮನಸ್ಸಿನಲ್ಲಿ ಕೇಡು, ಅಪಾಯದ ಬಗ್ಗೆ ಭೀತಿ ಮೂಡಿಸುವಂತಹದಾಗಿರಬೇಕು ಎಂದು ನ್ಯಾಯಾಲಯಗಳು ಭಾವಿಸಿದ್ದವು. ಆದರೆ, ಈಗ ಅದನ್ನು ತಿದ್ದುಪಡಿ ಮಾಡಿ 'ಕ್ರೂರ ನಡವಳಿಕೆ' ಎಂದು ಮಾತ್ರ ಹೇಳಿರುವುದರಿಂದ 'ಕ್ರೌರ್ಯ' ಪದದ ಅರ್ಥವ್ಯಾಪ್ತಿ ವಿಶಾಲವಾಗಿದೆ. ಅಪಾಯದ ಬಗ್ಗೆ ಭೀತಿ ಮೂಡಿಸದೇ ಇರುವಂತಹ ನಡವಳಿಕೆಯೂ 'ಕ್ರೌರ್ಯ'ದಲ್ಲಿ ಈಗ ಬರಬಹುದಾಗಿದೆ.

ಪತಿ ಪತ್ನಿಯರ ನಡುವಿನ ನವಿರಾದ ಸಂಬಂಧದಲ್ಲಿ ನಾನಾ ತರಹದ ಕೃತ್ಯಗಳು ಕ್ರೂರವೆನಿಸಿಕೊಳ್ಳಬಹುದು. ಜೀವನ ಹೆಚ್ಚು ಹೆಚ್ಚು ಸಂಕೀರ್ಣವಾಗುತ್ತಾ ಹೋದ ಹಾಗೆ, ಸಾಮಾಜಿಕ, ಸಾಂಸ್ಕೃತಿಕ ಸ್ತರಗಳಲ್ಲಿ ವ್ಯತ್ಯಾಸವಾದ ಹಾಗೆ ಕ್ರೌರ್ಯದ ಅರ್ಥವ್ಯಾಪ್ತಿಯೂ ಬದಲಾಗಬಹುದು. ಅಂತೆಯೇ ಆ ಪದವನ್ನು ವಿವರಿಸಲು ಶಾಸಕಾಂಗವು ಪ್ರಯತ್ನಿಸಿಲ್ಲ. ತನ್ನ ಮುಂದಿರುವ ವ್ಯಾಜ್ಯದಲ್ಲಿ ವಾದಿಯು ಹೇಳಿರುವ ಸಂಗತಿಗಳು ನಿಜವಾದಲ್ಲಿ ಅದು 'ಕ್ರೂರ ನಡವಳಿಕೆ' ಆಗುತ್ತದೆಯೇ ಎನ್ನುವುದನ್ನು ಪ್ರತಿ ವ್ಯಾಜ್ಯದಲ್ಲಿಯೂ ನ್ಯಾಯಾಲಯವು ತೀರ್ಮಾನಿಸ ಬೇಕಾಗುತ್ತದೆ. ಒಂದು ನಿರ್ದಿಷ್ಟ ಸೂತ್ರದ ಮೂಲಕ ಕ್ರೌರ್ಯವನ್ನು ಅರ್ಥೈಸಲು ಪ್ರಯತ್ನಿಸದೇ ಇರುವುದು ಸ್ವಾಗತಾರ್ಹ.

ದೈಹಿಕವಾದ ಹಿಂಸೆಯನ್ನು ಕಂಡುಹಿಡಿಯುವುದು ಸುಲಭ. ಆದರೆ ಮಾನಸಿಕ ಹಿಂಸೆಯನ್ನು ಅಳೆಯುವುದೆಂತು? ಇಲ್ಲಿ ಸಂಸ್ಕೃತಿ, ವಿದ್ಯೆ, ಜೀವನ ಕ್ರಮ ಇವುಗಳ ಪರಿಶೀಲನೆ ಅವಶ್ಯಕವಾಗುತ್ತದೆ. ಆರೋಗ್ಯ, ಗೌರವ, ವೃತ್ತಿಪ್ರಗತಿ ಇತ್ಯಾದಿಗಳಿಗೆ ಹಾನಿ ಉಂಟಾಗುವ ರೀತಿಯಲ್ಲಿ ನಡೆದುಕೊಂಡರೆ ಅದು ಹಿಂಸೆ, ಕ್ರೌರ್ಯವಾಗುತ್ತದೆ ಎಂದು ಭಾರತದ ಉಚ್ಚತಮ ನ್ಯಾಯಾಲಯವು ಅಭಿಪ್ರಾಯ ಪಟ್ಟಿದೆ.

ಒಂದು ಮೊಕದ್ದಮೆಯಲ್ಲಿ ದಂಪತಿಗಳಿಗೆ ಎರಡು ಹೆಣ್ಣು ಮಕ್ಕಳಿದ್ದರು. ಪತಿ ಸಾಲದಲ್ಲಿ ಸಿಕ್ಕಿಹಾಕಿಕೊಂಡು ಆಸ್ತಿ ಎಲ್ಲವನ್ನೂ ಕಳೆದುಕೊಂಡ ಪತ್ನಿಯು ಸಂಸಾರವನ್ನು ನಡೆಸಲು ಮನೆಯನ್ನು 'ಅತಿಥಿಗೃಹ'ವನ್ನಾಗಿ ನಡೆಸ ತೊಡಗಿದಳು. ಪತಿಯು ಹೊರಗಡೆಯೂ ಎಲ್ಲಿಯೂ ಗಳಿಸಲು ಪ್ರಯತ್ನಿಸಲಿಲ್ಲ, ಮನೆಯಲ್ಲಿ ಪತ್ನಿಗೂ ಸಹಾಯವನ್ನು ಮಾಡುತ್ತಿರಲಿಲ್ಲ. ಸಾಲಗಾರರ ಕಾಟ ಜಾಸ್ತಿಯಾದಾಗ ಪತ್ನಿ ಆಗಾಗ್ಗೆ ಅಲ್ಪ ಸ್ವಲ್ಪ ಹಣವನ್ನು ನೀಡಿ ಅವರನ್ನು ಸಮಾಧಾನಗೊಳಿಸುತ್ತಿದ್ದಳು. ಪತಿಯ ಈ ತರಹದ ನಡವಳಿಕೆಯಿಂದ ಪತ್ನಿಗೆ ಮನಶ್ಯಾಂತಿ ಮಾಯವಾಗಿ, ಆರೋಗ್ಯವಾಗಿ ಚಟುವಟಿಕೆಯಿಂದಿದ್ದ ಅವಳು ದೈಹಿಕವಾಗಿ, ಮಾನಸಿಕವಾಗಿ ಬಳಲಿ, ಸಂಸಾರವನ್ನು ನಿಭಾಯಿಸಲು ಅಶಕ್ತಳಾದಳು. ಇದರಲ್ಲಿ ಪತ್ನಿಗೆ ಹಿಂಸೆ ಮಾಡಬೇಕೆಂಬುದು ಪತಿಯ ಉದ್ದೇಶ್ಯವಲ್ಲದಿದ್ದರೂ, ನ್ಯಾಯಾಲಯವು ಅವಳ ದೂರನ್ನು ಮಾನ್ಯ ಮಾಡಿ, ಪತಿಯು ಪತ್ನಿಯನ್ನು ಹಿಂಸಿಸಿದ್ದಾನೆಂಬ ಕಾರಣದ ಮೇಲೆ ವಿವಾಹ ವಿಚ್ಛೇದನವನ್ನು ನೀಡಿತು.

ಮತ್ತೊಂದು ಮೊಕದ್ದಮೆಯಲ್ಲಿ ಮಾನಸಿಕ ವ್ಯಾಧಿಗೆ ಒಳಗಾಗಿ ಏನೇನೋ ಊಹೆಗಳನ್ನು ಮಾಡಿಕೊಳ್ಳುತ್ತಿದ್ದ ಪತಿಯು, ತನ್ನ ಪತ್ನಿಯು ವ್ಯಭಿಚಾರವನ್ನು ನಡೆಸುತ್ತಿದ್ದಾಳೆಂದು ಆಪಾದಿಸಿದ. ಇದರಿಂದ ಮಾನಸಿಕವಾಗಿ ಘಾಸಿಗೊಂಡು ಪತ್ನಿಯು ಅನಾರೋಗ್ಯ ಪೀಡಿತಳಾದಳು. 'ಹಿಂಸೆ'ಯ

ಕಾರಣದ ಮೇಲೆ ಆಕೆಯು ವಿವಾಹ ವಿಚ್ಛೇದನ ಕೋರಿದಾಗ, ಕೆಳಗಿನ ಎರಡು ನ್ಯಾಯಾಲಯಗಳು ಪತಿಗೆ ಬುದ್ಧಿ ಸರಿಯಿಲ್ಲದಿರುವುದರಿಂದ, ತಾನು ಮಾಡುತ್ತಿರುವ ಕಾರ್ಯದ ಅರಿವು ಅವನಿಗಿಲ್ಲ ಎಂದು ಆಕೆಯ ಅರ್ಜಿಯನ್ನು ತಿರಸ್ಕರಿಸಿದವು. ಆದರೆ, ಹೌಸ್ ಆಫ್ ಲಾರ್ಡ್ಸ್ ಆಕೆಯ ಅಪೀಲನ್ನು ಪುರಸ್ಕರಿಸಿ, 'ಹಿಂಸೆ'ಯ ಕಾರಣದ ಮೇಲೆ ವಿಚ್ಛೇದನ ಕೋರಿದಾಗ ಒಂದು ಕ್ರಿಯೆಯ ಪರಿಣಾಮ ಮುಖ್ಯವೇ ಹೊರತು ಉದ್ದೇಶ್ಯ ಮುಖ್ಯವಲ್ಲವೆಂದು ಅಭಿಪ್ರಾಯಪಟ್ಟಿತು. ಕಾರಣ, ಇಂತಹ ಸಂದರ್ಭಗಳಲ್ಲಿ ಪರಿಣಾಮವೇ ಉದ್ದೇಶ್ಯವನ್ನು ಸೂಚಿಸುತ್ತದೆ ಹಾಗೂ ತಾನು ಮಾಡುವ ಕಾರ್ಯದ ಪರಿಣಾಮದ ಅರಿವು ಪ್ರತಿವ್ಯಕ್ತಿಗೂ ಇರುತ್ತದೆ, ಹಾಗೂ ಇರಲೇಬೇಕು ಎಂಬುದು ಇದರ ಹಿಂದಿರುವ ತತ್ವವಾಗಿದೆ.

ಯಾವ ಕ್ರಿಯೆ 'ಹಿಂಸೆ' ಎನಿಸಿಕೊಳ್ಳುತ್ತದೆ ಎಂದು ತಿಳಿಯಲು ಲಿಂಗ ಭೇದ ಆಧಾರವಾಗಲಾರದು. ಕಾರಣ, ಒಂದು ವ್ಯಕ್ತಿಯು ಪುರುಷನೇ ಇರಲಿ, ಸ್ತ್ರೀಯೇ ಇರಲಿ, ಆ ವ್ಯಕ್ತಿಯ ಸ್ವಭಾವದ ಸೂಕ್ಷ್ಮತೆಯ ಮೇಲೆ ಪರಿಣಾಮ ಅವಲಂಬಿಸುತ್ತದೆ.

ಸದಾ ಕಾಯಿಲೆಯಿಂದ ನರಳುತ್ತಿದ್ದ ಪತ್ನಿಯು, ಪತಿಯು ರಾತ್ರಿಯಿಡೀ ತನ್ನ ಹತ್ತಿರ ಕುಳಿತು, ತನಗೆ ಪುಸ್ತಕವನ್ನು ಓದಿ ಹೇಳಬೇಕೆಂದು ಒತ್ತಾಯಿಸುತ್ತಿದ್ದಳು. ಸೈನ್ಯದಲ್ಲಿ ಅಧಿಕಾರಿಯಾದ್ದ ಪತಿಗೆ ಇದರಿಂದ ರಾತ್ರಿಯಿಡೀ ನಿದ್ದೆ ಹಾನಿಯಾಗಿ ಆರೋಗ್ಯ ಕೆಟ್ಟಿದ್ದೂ ಅಲ್ಲದೇ, ಕೆಲಸಕ್ಕೂ ತೊಂದರೆಯಾಗುತ್ತಿತ್ತು. ಪತ್ನಿಯ ಈ ಅಸಮಂಜಸವಾದ ನಡೆತೆಯನ್ನು ನ್ಯಾಯಾಲಯವು 'ಹಿಂಸೆ' ಎಂದು ಪರಿಗಣಿಸಿತು.

ಪತಿ-ಪತ್ನಿಯರ ನಡುವೆ ಲೈಂಗಿಕ ಸಂಬಂಧ ಸಹಜವಾಗಿಲ್ಲದಾಗಲೂ ಅದು 'ಹಿಂಸೆ' ಎನಿಸಬಹುದು. ಒಂದು ಸಂದರ್ಭದಲ್ಲಿ ಪತಿಯು ವಿನಾಕಾರಣ ಪತ್ನಿಯೊಂದಿಗೆ ಸುಮಾರು 6 ವರ್ಷಕಾಲ ಲೈಂಗಿಕ ಸಂಬಂಧವನ್ನು ತ್ಯಜಿಸಿದ್ದು ವೈದ್ಯರು ಬುದ್ಧಿ ಹೇಳಿದಾಗಲೂ, ಪತ್ನಿಯು ಎಚ್ಚರಿಸಿದಾಗಲೂ ಪರಿಸ್ಥಿತಿ ಸುಧಾರಿಸದಿದ್ದಾಗ, ನ್ಯಾಯಾಲಯವು ಪತಿಯು ಈ ಅಸಹಜವಾದ ನಡವಳಿಕೆಯನ್ನು 'ಹಿಂಸೆ' ಎಂದು ತೀರ್ಮಾನಿಸಿತು. ಮತ್ತೊಂದು ಸಂದರ್ಭದಲ್ಲಿ ತನಗೆ ಮಗು ಬೇಕಿಲ್ಲವೆಂದು ತೀರ್ಮಾನಿಸಿದ್ದ ಪತ್ನಿಯು ಪತಿಯೊಂದಿಗೆ ಸಂಭೋಗ ಕ್ರಿಯೆಯಲ್ಲಿ ಸಹಕಾರ ನೀಡುತ್ತಿರಲಿಲ್ಲ. ಮುಂದೆ ಅವಳು ಅವನನ್ನು ಬಿಟ್ಟು ಹೊರಟುಹೋದಳು. ಇದರಿಂದ ಪತಿಯ ದೈಹಿಕ, ಮಾನಸಿಕ ಆರೋಗ್ಯ ಕೆಟ್ಟಿತು. ಪತ್ನಿಯ ಈ ವಿವೇಚನಾರಹಿತ ನಡವಳಿಕೆಯನ್ನು ನ್ಯಾಯಾಲಯವು 'ಹಿಂಸೆ' ಎಂದು ತಿಳಿಯಿತು. ಇತ್ತೀಚಿನ ಒಂದು ಮೊಕದ್ದಮೆಯಲ್ಲಿ ನಮ್ಮ ದೇಶದ ಸರ್ವೋಚ್ಚ ನ್ಯಾಯಾಲಯವು ಇದೇ ವಿಷಯದ ಬಗ್ಗೆ ತೀರ್ಪು ನೀಡಿ. ಅಸಹಕಾರವನ್ನು 'ಹಿಂಸೆ' ಎಂದು ಪರಿಗಣಿಸಿ ವಿಚ್ಛೇದನ ನೀಡಿದೆ.

ಮತ್ತೊಂದು ಸಂದರ್ಭದಲ್ಲಿ ಪತ್ನಿಯ ಒಪ್ಪಿಗೆ ಪಡೆಯದೇ ಪತಿಯು ಸಂತಾನಹರಣಚಿಕಿತ್ಸೆ ಮಾಡಿಸಿಕೊಂಡಿದ್ದರಿಂದ, ಅವಳಿಗೆ ಮಗುವನ್ನು ಪಡೆಯುವ ಅವಕಾಶ ತಪ್ಪಿತು. ಇದರಿಂದ ಅವಳ ಆರೋಗ್ಯಕ್ಕೆ ಹಾನಿಯಾಗಿದೆ ಅಥವಾ ಆಗುವ ಸಂಭವ ಇದೆ ಎಂದು ನ್ಯಾಯಾಲಯವು 'ಹಿಂಸೆ'ಯ ಕಾರಣದ ಮೇಲೆ ವಿಚ್ಛೇದನ ನೀಡಿತು. ಆದರೆ 'ಷಂಡತನ'ವೊಂದೇ ಹಿಂಸೆಯಾಗಲಾರದು ಎಂದು ಕೆಲವು ಸಂದರ್ಭಗಳಲ್ಲಿ ಅಭಿಪ್ರಾಯ ಪಡಲಾಗಿದೆ. ವಿವಾಹದ ಮೊದಲು ಪತಿಯ ಷಂಡತನದ ಬಗ್ಗೆ ಅರಿವು ಇದ್ದು ವಿವಾಹವಾಗಿ, ನಂತರ ಅದಕ್ಕಾಗಿ ಆತನನ್ನು ಹಿಯ್ಯಾಳಿಸುವುದು ಪತಿಗೆ 'ಹಿಂಸೆ' ಎನಿಸುತ್ತದೆ ಎಂದು ನ್ಯಾಯಾಲಯ ತಿಳಿಸಿತು.

ಮೊಕದ್ದಮೆಯೊಂದರಲ್ಲಿ ಪತ್ನಿಗೆ ಕುಷ್ಠರೋಗ ತಗುಲಿದ್ದು ಮೂಗಿನಿಂದ ದುರ್ವಾಸನೆ ಹೊರಡುತ್ತಿತ್ತು. ಇದರಿಂದ ಪತಿಗೆ ಪತ್ನಿಯ ಬಳಿಗೆ ಹೋಗಲು ಅಸಹ್ಯವಾಗಿ ವೈವಾಹಿಕ ಜೀವನ ದುರ್ಭರವಾಯಿತು. ಇದನ್ನು ನ್ಯಾಯಾಲಯವು 'ಹಿಂಸೆ' ಎಂದು ಪರಿಗಣಿಸಿ ಪತಿಗೆ ವಿಚ್ಛೇದನ ನೀಡಿತು ಜಮ್ಮು ಮತ್ತು ಕಾಶ್ಮೀರ ಹೈಕೋರ್ಟಿನ ಈ ತೀರ್ಪನ್ನು ಕಟುವಾಗಿ ಟೀಕಿಸಿ ಅದರ ತತ್ವಾಧಾರ ಸಮಂಜಸವಾಗಿಲ್ಲವೆಂದು ಅಭಿಪ್ರಾಯ ಪಡಲಾಗಿದೆ ಮತ್ತು ಮುಂದೆ ಮತ್ತೊಂದು ಮೊಕದ್ದಮೆಯಲ್ಲಿ ಈ ವಾದವನ್ನು ತಳ್ಳಿ ಹಾಕಲಾಗಿದೆ. ಹಿಂಸೆ ಎಂದಾಗಲು ಒಂದು ಕ್ರಿಯೆ ಬೇಕಾಗುತ್ತದೆ. ಆದರೆ, ಇಲ್ಲಿ ಕುಷ್ಠರೋಗ ಒಬ್ಬ ವ್ಯಕ್ತಿಯು ಸ್ವಇಚ್ಛೆಯಿಂದ ಕೈಗೊಂಡ ಕಾರ್ಯವಲ್ಲ, ಅದೊಂದು ರೋಗ. ಪತ್ನಿಯ ಅಸಹಾಯಕತೆ ಹಾಗೂ ದುರಾದೃಷ್ಟದ ಪರಿಸ್ಥಿತಿಯನ್ನು ಪತಿಗೆ 'ಹಿಂಸೆ' ಎಂದು ನ್ಯಾಯಾಲಯ ಹೇಳಿದರೆ, ಇಂತಹ ನಾನಾ ಅಸಹಾಯಕ ಸ್ಥಿತಿಗಳನ್ನು ಅದೇ ರೀತಿ ಪರಿಗಣಿಸಿ ವಿಚ್ಛೇದನ ನೀಡಬೇಕಾಗುತ್ತದೆ. ಅಂತಹ ಸಂದರ್ಭಗಳಲ್ಲಿ ಮಾನವೀಯ ಅನುಕಂಪಕ್ಕೆ ಬೆಲೆ ಇಲ್ಲವಾಗುತ್ತದೆ.

ಪತಿಯು ವಿವಾಹಬಾಹಿರ ಸಂಬಂಧ ಹೊಂದಿದಾಗ, ಮತ್ತೊಬ್ಬ ಹೆಂಗಸನ್ನು ಮದುವೆಯಾಗುತ್ತೇನೆಂದು ಮಾತುಕೊಟ್ಟಾಗ, ಉಪ-ಪತ್ನಿಯನ್ನು ಮನೆಯಲ್ಲಿ ಕರೆತಂದು ಪತ್ನಿಯೊಂದಿಗೆ ಒಂದೇ ಮನೆಯಲ್ಲಿ ಇಟ್ಟುಕೊಂಡಾಗ ಅದು ಪತ್ನಿಗೆ ಹಿಂಸೆಯಾಗುತ್ತದೆಂದು ಅಭಿಪ್ರಾಯ ಪಡಲಾಗಿದೆ.

ಪತಿಯು ಲೈಂಗಿಕ ರೋಗದಿಂದ ನರಳುತ್ತಿದ್ದು, ಅದು ತನ್ನ ಪತ್ನಿಗೆ ಹತ್ತಬಹುದು ಎಂದು ತಿಳಿದಿದ್ದರೂ ವಿವೇಚನೆ ಇಲ್ಲದೇ ಪತ್ನಿಯೊಂದಿಗೆ ಲೈಂಗಿಕ ಸಂಬಂಧ ಹೊಂದಿ ಅವಳಿಗೆ ರೋಗವನ್ನು ತಗುಲಿಸಿದಾಗ ಅದೂ ಹಿಂಸೆಯಾಗುತ್ತದೆ. ಕೆಲವು ಸಂದರ್ಭಗಳಲ್ಲಿ ರೋಗ ತಗುಲದಿದ್ದರೂ, ಅಂತಹ ಸಂದರ್ಭದಲ್ಲಿ ಒಲ್ಲದ ಪತ್ನಿಯೊಂದಿಗೆ ಬಲತ್ಕಾರ ನಡೆಸಿದಾಗ ಹಿಂಸೆ ಎನಿಸುತ್ತದೆ.

ಇಂತಹ ಸಂಗತಿಗಳನ್ನು ಸಂದರ್ಭಗಳನ್ನು ಸಾಬೀತುಗೊಳಿಸುವ ಹೊಣೆ ವಿಚ್ಛೇದನ ಕೋರಿ ಅರ್ಜಿ ಹಾಕಿರುವ ಅರ್ಜಿದಾರರ ಮೇಲಿರುತ್ತದೆ.

ಎಲ್ಲೆಡೆ ಇರುವಂತೆ ಇಲ್ಲಿಯೂ ಪುರುಷ ಶ್ರೇಷ್ಠತೆಯ ಭಾವನೆ ಪ್ರಚಲಿತವಿದೆ. ಪತ್ನಿ ಎಂದರೆ ಕೇವಲ ಪತಿಯ ನೆರಳು ಎಂಬ ಭಾವನೆ ಬೇರೂರಿದೆ.

ತಾವು ಆಫೀಸಿನಲ್ಲಿ ಸಹೋದ್ಯೋಗಿ ಲೇಡಿ ಟೈಪಿಸ್ಟ್, ಕ್ಲರ್ಕ್‌ಗಳೊಡನೆ ಸಲಿಗೆ ತೋರಿದರೂ, ಕಾಫಿಗೆ ಜೊತೆಗೇ ಕ್ಯಾಂಟೀನಿಗೆ ಹೋದರೂ ತಾವು ಗಂಡಸರು. ಆದರೆ, ತನಗೆ ಹೆಂಡತಿಯ ಮೇಲೆ ಪ್ರೀತಿ ಇರುವುದರಿಂದ ತಾನೇ ಆಕೆ ಆಕಸ್ಮಿಕವಾಗಿ ಗೇಟಿನ ಹತ್ತಿರ ಬಂದು ನಿಂತಿದ್ದರೆ, ಕಿಟಕಿಯಿಂದ ಹೊರ ನೋಡುತ್ತಿದ್ದರೆ, ತಮ್ಮ ಊರಿನ ಗುರುತಿನವರೊಡನೆ, ಕಾಲೇಜಿನ ಸಹಪಾಠಿಯೊಡನೆ ಮಾತನಾಡಿದರೆ ಗದರಿಸುವುದು ಆಕೆಯ ಮೇಲೆ ಪ್ರೀತಿಯಿಲ್ಲದಿದ್ದರೆ ಈ ಅನುಮಾನವಾದರೂ ಎಲ್ಲಿ ಬರುತ್ತಿತ್ತು?... ಇತ್ಯಾದಿ... ಇತ್ಯಾದಿ... ಒಂದೇ ಎರಡೇ! ಇದನ್ನೆಲ್ಲ 'ಹಿಂಸೆ' ಎಂದು ಪತಿಯೂ ಭಾವಿಸುವುದಿಲ್ಲ. ಪತ್ನಿಯೂ ಹೆಚ್ಚು ಗಂಭೀರವಾಗಿ ವಿಚಾರ ಮಾಡಲು ಹೋಗುವುದಿಲ್ಲ. ಎಲ್ಲರೂ ಇದನ್ನು 'ಜೀವನದ ರೀತಿ' ಎಂದೇ ಒಪ್ಪಿಕೊಂಡಿರುವಂತಿದೆ. ಇದಕ್ಕೂ ಹೆಚ್ಚಿನ, ಉತ್ತಮ ಮಟ್ಟದ ಜೀವನ ಇದೆ ಎಂಬುದೇ ಇವರಿಗೆ ತಿಳಿದಿರುವುದಿಲ್ಲ.

ಭಾರತದಲ್ಲಿ ಮನೆಯ ಹೊರಗೆ, ಬೇರೆ ಸ್ತ್ರೀಯನ್ನು ಗೌರವದಿಂದ ಕಂಡರೂ ಮನೆಯ ಒಳಗೆ ಪತ್ನಿಗೆ ಆ ಸ್ಥಾನಮಾನವಿಲ್ಲ. ಆಕೆ ಮನೆಯಲ್ಲಿ ''ಯಕಶ್ಚಿತ್ ಹೆಂಗಸೇ''.

ಸಾಮಾನ್ಯವಾಗಿ ಕೆಳವರ್ಗದ ಜನಗಳಲ್ಲಿ ದೈಹಿಕ ಹಿಂಸೆ ಕಂಡುಬರುತ್ತದೆ. ಕುಡಿದು ಬಂದು ಹೆಂಡತಿಯನ್ನು ಹೊಡೆಯುವುದು, ಆಕೆ ಕಷ್ಟಪಟ್ಟು ಮಕ್ಕಳ ಗಂಜಿಗಾಗಿ ಸಂಪಾದಿಸಿದ ಪುಡಿಗಾಸನ್ನು ಜೂಜು, ಹೆಂಡಕ್ಕಾಗಿ ಕಿತ್ತುಕೊಂಡು ಹೋಗುವುದು, ಮಾತು ಕೇಳಲಿಲ್ಲವೆಂದು, ಪ್ರತಿಮಾತನಾಡಿದಳೆಂದು, ಚಚ್ಚುವುದು, ದೈಹಿಕ ಬಲದಿಂದ ಅವಳ ಒಪ್ಪಿಗೆ ವಿರುದ್ಧ ಸಂಭೋಗ ನಡೆಸುವುದು ಇವು ಅವರಲ್ಲಿ ಸರ್ವೆ ಸಾಮಾನ್ಯವಾಗಿ ಕಾಣುವ ಸಂಗತಿ.

ಮಧ್ಯಮ ಹಾಗೂ ಮೇಲ್ವರ್ಗದ ಜನಗಳಲ್ಲಿ ದೈಹಿಕ ಹಿಂಸೆ ಅಷ್ಟಾಗಿ ಕಂಡು ಬರುವುದಿಲ್ಲ. ಮಾನಸಿಕ ಹಿಂಸೆಯದೇ ಮೇಲುಗೈ. ಇದಕ್ಕೇನು ಕಾರಣ?

ಮುಖ್ಯವಾಗಿ ಸ್ತ್ರೀಯರನ್ನು ಹಿಂಸಿಸಲು ಹಣದ ಬಗ್ಗೆ ದುರಾಸೆ ಬಹಳ ಮಟ್ಟಿಗೆ ಕಾರಣವಾಗಿದೆ. ರಾತ್ರೋರಾತ್ರಿ ಶ್ರೀಮತರಾಗಬಯಸುವ ಈ ಪತಿವರ್ಯರು ಹೆಂಡತಿ ತನ್ನ ತೌರಿನಿಂದ ಎಲ್ಲವನ್ನೂ ಹೊತ್ತುಕೊಂಡು ಬರಬೇಕೆಂದು ನಿರೀಕ್ಷಿಸುತ್ತಾರೆ. ಮೂದಲಿಕೆ ಮಾತುಗಳು, 'ಹೋಗಿ ಮತ್ತಷ್ಟು ತೆಗೆದುಕೊಂಡು ಬಾ, ಇಲ್ಲವಾದರೆ ಬರಬೇಡ' ಎಂದು ತೌರಿಗೆ ಪತ್ನಿಯನ್ನು ಅಟ್ಟುವುದು, 'ನಿನ್ನ ತೌರಿನ ಮುಖವನ್ನು ನಾನೂ ನೋಡುವುದಿಲ್ಲ , ನೀನೂ ನೋಡಬಾರದು' ಎಂದೂ ಕಟ್ಟಪ್ಪಣೆ ಮಾಡುವುದು ಕಡಿಮೆ ದರ್ಜೆಯ ಹಿಂಸೆ ಎಂದೇ ತಿಳಿಯಬೇಕು, ಸೀಮೆ ಎಣ್ಣೆ ಸುರಿದು ಬೆಂಕಿ ಹಚ್ಚುವ ಮಾನವ ಮೃಗಗಳಿರುವ ಈ ಯುಗದಲ್ಲಿ. ಇದಕ್ಕೆಲ್ಲಾ ಯಾವಾಗಲೂ ಗಂಡಸೊಬ್ಬನೇ ಕಾರಣನೆಂದು ತಿಳಿಯಬಾರದು. ಎಷ್ಟೋ ಸಂದರ್ಭದಲ್ಲಿ, ಮನೆಯ ಹೆಂಗಸರೂ ಮುಖ್ಯ ಕಾರಣರಾಗುತ್ತಾರೆ. ಅತ್ತೆ ನಾದಿನಿಯರು ಈ ಹಿಂಸೆಗೆ ಮೂಲ ಕಾರಣ ಕರ್ತೃಗಳಾಗಿರುತ್ತಾರೆ. ಅಂತಹ ಸಂದರ್ಭದಲ್ಲಿ ಗಂಡನಾದರೂ ತನ್ನ ಬಗ್ಗೆ ಸಹಾನುಭೂತಿಯನ್ನು ಹೊಂದಿದ್ದರೆ ಆಕೆಗೆ ಜೀವನ ಸಹ್ಯವಾಗಿರುತ್ತದೆ. ವಿದ್ಯೆಯಿದ್ದರೆ ಸಾಲದು, ಮನುಷ್ಯನಿಗೆ ಸಂಸ್ಕೃತಿಬೇಕು, ಮನಸ್ಸಿಗೆ ಉತ್ತಮ ಸಂಸ್ಕಾರವಿರಬೇಕು ಇಲ್ಲದಿದ್ದರೆ ಹೆಣ್ಣಿನ ಬದುಕು ನರಕವಾಗುತ್ತದೆ ಎನ್ನುವುದನ್ನು ನಮ್ಮ ಇಂದಿನ ವಿದ್ಯಾವಂತ ಪೀಳಿಗೆಯ ದುರಾಸೆಯ ಅಳಿಯಂದಿರು ಸಾಬೀತು ಪಡಿಸುತ್ತಿದ್ದಾರೆ.

ಮೊಕದ್ದಮೆಯಲ್ಲಿ ದೈಹಿಕ ಹಿಂಸೆಯ ಪ್ರಸಂಗ ಬಂದಾಗ ಸಾಕ್ಷ್ಯಾಧಾರದ ಆಧಾರದ ಮೇಲೆ ಸುಲಭವಾಗಿ ನ್ಯಾಯಾಲಯಗಳು ಅದು ಹಿಂಸೆ ಹೌದೋ ಅಲ್ಲವೋ ಎಂದು

ತೀರ್ಮಾನ ಕೊಡುತ್ತವೆ. ಆದರೆ, ಮಾನಸಿಕ ಹಿಂಸೆಯ ಬಗ್ಗೆ ತೀರ್ಮಾನ ಕೊಡುವುದು ಕಠಿಣವಾದ ಕೆಲಸ. ಹೆಣ್ಣಿನ ಸೂಕ್ಷ್ಮವಾದ ಮನಸ್ಸಿನ ಆಗುಹೋಗುಗಳನ್ನು ಅರ್ಥಮಾಡಿಕೊಳ್ಳಬಲ್ಲ, ಅವರ ಸ್ಥಿತಿಯನ್ನು ಸಹಾನುಭೂತಿ ಪರವಾಗಿ ಪರಿಶೀಲಿಸಬಲ್ಲ ತಕ್ಕ ಮನೋಭಾವದ ನ್ಯಾಯಾಧೀಶರು ಇರುವುದ ಅವಶ್ಯಕ. ಹಾಗೆಂದೇ, ವೈವಾಹಿಕ ವ್ಯಾಜ್ಯಗಳೆಲ್ಲಾ ಪ್ರತ್ಯೇಕ ನ್ಯಾಯಾಲಯದಲ್ಲಿ ವಿಚಾರಣೆಯಾಗುವುದು ಸೂಕ್ತ. ಇಲ್ಲವಾದರೆ ಉಳಿದ ಹಣದ, ಆಸ್ತಿಯ ವ್ಯಾಜ್ಯಗಳ ನಡುವೆ, ಇದರ ಬಗ್ಗ ಪುರುಷ ಶ್ರೇಷ್ಠ ಧೋರಣೆಯ ಮನೋಭಾವದಿಂದ ವರ್ತಿಸಿದರೆ ಹಿಂಸೆಯ ಕಾರಣದ ಮೇಲೆ ವಿಚ್ಛೇದನ ಬಯಸುವ ಸ್ತ್ರೀಯರಿಗೆ ಅನ್ಯಾಯವಾಗುತ್ತದೆ. ದೈಹಿಕ ಹಿಂಸೆಯೊಂದೇ ಹಿಂಸೆಯಾಗಿ ಕಂಡು, ಮಾನಸಿಕ ಹಿಂಸೆಗಳು ಗೌಣವಾಗಿ ಕಂಡು ಬರುವ ಸಂಭವವೂ ಇರುತ್ತದೆ. 'ಸಂಸಾರ ಎಂದರೆ ಗಂಡ-ಹೆಂಡಿರ ನಡುವೆ ಅವೆಲ್ಲಾ ಇರುವುದೇ' ಎನ್ನುವ ಧೋರಣೆ ನ್ಯಾಯಾಧೀಶರಿಗೆ ಇದ್ದರೆ ಯಾವ ಮಾನಸಿಕ ಹಿಂಸೆಯನ್ನೂ ಸಾಬೀತುಪಡಿಸುವುದು ಕಷ್ಟ ಆಗುತ್ತದೆ.

ಇಂದು ಹೆಚ್ಚಿನ ಪತಿ ಪತ್ನಿಯರ ನಡುವೆ ದೈಹಿಕ, ಮಾನಸಿಕ ಹಿಂಸೆ 'ಸಹಜ ಜೀವನ ಕ್ರಮ' ಎಂದೇ ಆಗಿದ್ದರೂ ವಿವಾಹ ವಿಚ್ಛೇದನ ಬಹು ಹೆಚ್ಚಿನ ಪ್ರಮಾಣದಲ್ಲಿ ಆಗದಿರುವುದಕ್ಕೆ ಸ್ತ್ರೀಯರೇ ಕಾರಣ. ತಮಗೆ ತೊಂದರೆಯಾದರೂ ಪರವಾಗಿಲ್ಲ ಸಂಸಾರ ಉಳಿಸಬೇಕು ಎನ್ನುವ ಅವರ ಹಂಬಲವೇ ಕಾರಣ. ಆದ್ದರಿಂದ, ಹಗ್ಗ ಹರಿಯುವವರೆಗೆ ಎಳೆಯದಿದ್ದರೇ ಕ್ಷೇಮ !

**- ಹೇಮಲತಾ ಮಹಿಷಿ**

---

**ಕಿರಿಯ ಸಾಹಿತಿ, ಅದರಲ್ಲೂ ಮಹಿಳೆ ದಿಟ್ಟವಾಗಿ ಬರೆಯಲು ಹೊರಟಾಗ ಬರುವ ಎಡರುತೊಡರುಗಳು ನೂರಾರು ಬಗೆಯವು. ಅದೂ ಪುರುಷರೇ ಹೆಚ್ಚಾಗಿ ಇಂಥ ಅಡ್ಡಿ ಆತಂಕಗಳನ್ನೊಡ್ಡಿ, ಲೇಖಕಿಯರ ಹಾದಿಯಲ್ಲಿ ಮುಳ್ಳುಗಳನ್ನು ಹರವುವ ಹುನ್ನಾರು ನಡೆಸುತ್ತ ಬಂದಿರುವುದು ಸ್ಪಷ್ಟವಾಗಿದೆ.**

★★★

**..... ಸಮಾಜಕ್ಕೆ ಸೆಡ್ಡು ಹೊಡೆದು ನಿಂತು ತನ್ನ ಬದುಕನ್ನು ತಾನು ತನಗೆ ತೋಚಿದಂತೆ ರೂಪಿಸಿಕೊಳ್ಳುವ ಛಲ ಕೆಲ ಹೆಣ್ಣುಗಳಲ್ಲಿರುತ್ತದೆ, ಅಥವಾ ಬರುತ್ತದೆ. ಅಂಥವರು ಯಾವುದಕ್ಕೂ ರಾಜಿ ಮಾಡಿಕೊಳ್ಳುವುದೇ ಇಲ್ಲ. ಆಗ ಅವರು ಎತ್ತಿಡುವ ಹೆಜ್ಜೆಗಳು ಹೊಸಹಾದಿಯನ್ನೇ ಹುಟ್ಟಿಸುತ್ತವೆ. ನನ್ನ ಸ್ವಭಾವವೂ ಅಷ್ಟೇ. ಎಲ್ಲರಂತೆ ಸಾಮಾನ್ಯ ಹೆಣ್ಣು ಮಗಳಾಗಿ, ಹತ್ತರಲ್ಲಿ ಹನ್ನೊಂದನೆಯವಳಾಗಿ ಬದುಕಿ, ಸಾಯುವುದು ನನಗೆ ಬೇಕಾಗಿಲ್ಲ. ಎಲ್ಲರಿಗಿಂತ ನಾನು ಭಿನ್ನವಾಗಿ ನಿಂತು ನನ್ನದೇ ಆದ ವಿಶಿಷ್ಟತೆಯನ್ನು ಹೊಂದಬೇಕೆಂಬ ಛಲ ನನ್ನೆದೆಯ ತಳದಲ್ಲಿ ಬತ್ತದ ಗಂಗೆಯಾಗಿ ಹರಿಯುತ್ತಿರುವಾಗಲೇ ನಾನು ನನಗೆ ಬಂದ ಎಲ್ಲ ಸಮಸ್ಯೆಗಳನ್ನೂ ಸವಾಲಾಗಿಯೇ ಸ್ವೀಕರಿಸಿ ಬದುಕಲು ನಿರ್ಧರಿಸಿದೆ.**

- ಶ್ರೀಮತಿ ಗೀತಾ ನಾಗಭೂಷಣ (ಲೇಖ-ಲೋಕ ಕೃತಿಯಲ್ಲಿ)

# ಚಿಕುಂಗುನ್ಯ : ಗಾಬರಿ ಬೇಡ : ನಿಮಗಿದು ತಿಳಿದಿರಲಿ

ಇದು ಒಂದು ವೈರಸ್ ಕಾಯಿಲೆಯೆಂದು ಖಚಿತಪಟ್ಟಿರುತ್ತದೆ. ಈ ಕಾಯಿಲೆಯಿಂದ ನರಳುವವರು ಇದ್ದಕ್ಕಿದ್ದಂತೆ ಸಾಧಾರಣದಿಂದ ತೀವ್ರ ಜ್ವರಕ್ಕೊಳಗಾಗಿ ಮೈ ಕೈ ನೋವು, ತಲೆನೋವು, ಸ್ನಾಯು ಮತ್ತು ಕೀಲುಗಳಲ್ಲಿ ತೀವ್ರ ತರವಾದ ನೋವು, ಕಣ್ಣುಗಳು ಕೆಂಪಾಗುವಿಕೆ, ನಿಶ್ಯಕ್ತಿಗೀಡಾಗಿ ಓಡಾಡಲು ಸಹ ಅಶಕ್ತರಾಗುತ್ತಾರೆ. ಕ್ರಮೇಣ 8-10 ದಿವಸಗಳಲ್ಲಿ ತಾವಾಗಿಯೇ ಗುಣಮುಖರಾಗಿರುತ್ತಾರೆ. ಈ ರೋಗ ಮಾರಣಾಂತಿಕವಲ್ಲವೆಂಬುದನ್ನು ಮರೆಯಬಾರದು.

ಮೇಲೆ ತಿಳಿಸಿರುವ ಚಿಕುಂಗುನ್ಯ ಜ್ವರದ ಚಿಹ್ನೆಗಳು ಕಾಣಿಸಿದಲ್ಲಿ ಕೂಡಲೇ ಹತ್ತಿರದ ಸರ್ಕಾರಿ ಆಸ್ಪತ್ರೆ ಸಂಪರ್ಕಿಸಿ ಚಿಕಿತ್ಸೆ ಪಡೆಯಬೇಕು.

ಈ ರೋಗ ಹರಡಲು ಈಡಿಸ್ ಈಜಿಪ್ಟೈ ಸೊಳ್ಳೆಗಳು ಕಾರಣವಾಗಿರುವುದರಿಂದ ಈ ಸೊಳ್ಳೆಗಳು ಉತ್ಪತ್ತಿಯಾಗುವ ತಾಣಗಳಾದ ನೀರು ಶೇಖರಣಾ ತೊಟ್ಟಿ, ಡ್ರಮ್‌ಗಳು, ಬ್ಯಾರಲ್‌ಗಳು ಮುಂತಾದವುಗಳಲ್ಲಿನ ನೀರನ್ನು ವಾರಕ್ಕೊಮ್ಮೆ ಖಾಲಿ ಮಾಡಿ ಒಣಗಿಸಿ ಮತ್ತೆ ಭರ್ತಿ ಮಾಡಿಕೊಳ್ಳಬೇಕು ಹಾಗೂ ಇವುಗಳನ್ನು ಭದ್ರವಾದ ಮುಚ್ಚಳದಿಂದ ಮುಚ್ಚಬೇಕು. ಒಡೆದ ಟೈರು, ಪ್ಲಾಸ್ಟಿಕ್ ಕಪ್ಪು, ಒಡೆದ ಬಾಟಲಿ, ಟಿನ್ನು , ತೆಂಗಿನ ಚಿಪ್ಪುಗಳಲ್ಲಿ ನೀರು ಸಂಗ್ರಹವಾಗದಂತೆ ನೋಡಿಕೊಳ್ಳಬೇಕು. ಏರ್ ಕಂಡೀಷನರ್, ರೆಫ್ರಿಜಿರೇಟರ್‌ಗಳಲ್ಲಿನ ನೀರನ್ನು ವಾರಕ್ಕೊಮ್ಮೆ ಬದಲಾಯಿಸುತ್ತಿರಬೇಕು. ನೂತನ ಕಟ್ಟಡ ಕಟ್ಟುತ್ತಿರುವವರು ನೀರಿನ ತೊಟ್ಟಿಗಳನ್ನು ಪ್ರತಿ ವಾರ ಖಾಲಿ ಮಾಡಿ ಮನೆಯ ಸುತ್ತಮುತ್ತ ನೀರು ನಿಲ್ಲದಂತೆ ಎಚ್ಚರಿಕೆ ವಹಿಸಬೇಕು. ಹಗಲಿನಲ್ಲಿ ಕಚ್ಚುವ ಈ ಸೊಳ್ಳೆಗಳು ಚಿಕುಂಗುನ್ಯ ಜ್ವರವನ್ನು ಹರಡುತ್ತವೆ. ಮಲಗುವ ವೇಳೆಯಲ್ಲಿ ಸೊಳ್ಳೆಯ ಪರದೆಯನ್ನು ಉಪಯೋಗಿಸುವುದರಿಂದ ರೋಗ ಹರಡುವುದನ್ನು ನಿಯಂತ್ರಿಸಬಹುದು.

ಆರೋಗ್ಯ ಇಲಾಖೆಯು ಕೈಗೊಂಡಿರುವ ಜ್ವರ ನಿಯಂತ್ರಣ ಕ್ರಮಗಳಿಗೆ ಸಾರ್ವಜನಿಕರು ಸಹಕರಿಸಬೇಕಾಗಿ ವಿನಂತಿ.

- ಸೊಳ್ಳೆಗಳ ನಿಯಂತ್ರಣ ನಮ್ಮ ನಿಮ್ಮೆಲ್ಲರ ಕರ್ತವ್ಯ

ಸುವರ್ಣ ಕರ್ನಾಟಕದ ವರ್ಷ

2006 - 07

ಕರ್ನಾಟಕ ವಾರ್ತೆ
Karnataka Information

CPMG/KA/BGS-8/2006-08
RNI NO 45577/88
Posted at Basavanagudi : P.O. On the 25th/29th of Every Month
July - 2006

## ದೇವರೇ........ ಇದು ನಿಜವೇ?

ದೇವರೇ
ನೀನೀಗ ಮುನಿದುಕೊಂಡಿದ್ದೀಯಂತೆ
ಉರಿದು ಶಪಿಸುವೆಯಂತೆ
ನಿಜವೆ.......?

ಮನುಜನ ಅನಾಚಾರಕ್ಕೆ
ಭುವಿ, ಬಾನು, ಕಡಲು
ಕಲುಷಿತಗೊಂಡು ಅತ್ಯಾಸೆ, ಸ್ವಾರ್ಥಕ್ಕೆ
ಜಗತ್ತು ಪ್ರಕ್ಷುಬ್ಧಗೊಂಡು
ಪ್ರಳಯ ಸಂಭವಿಸುತ್ತಿದ್ದರೂ
ವಿಚಲಿತನಾಗದವನು
ಕುಳಿತ ಭಂಗಿ ಸ್ವಲ್ಪವೂ ಬದಲಿಸದವನು
ಈಗ ಕನಲಿ ಕೆಂಡವಾಗಿದ್ದೀಯಂತೆ
ಉರಿದು ಶಪಿಸುವೆಯಂತೆ
ನಿಜವೆ......?

ಹಾಡು ಹಗಲೇ ಕೊಲೆ ಸುಲಿಗೆಗಳಾದರೂ
ಹಸುಳೆಗಳ ಮೇಲೆ
ಅತ್ಯಾಚಾರ ನಡೆದರೂ
ಮಳೆಯಂತೆ ಆ್ಯಸಿಡ್ ಹೊಳೆ ಹರಿದರೂ
ಅಸಹಾಯಕರ ಆಕ್ರಂದನಕೆ
ಕರಗದೆ ಕಲ್ಲಾಗಿಯೇ ಉಳಿದವನು
ಈಗ ಕೋಪಗೊಂಡಿದ್ದೀಯಂತೆ
ಉರಿದು ಶಪಿಸುವೆಯಂತೆ
ನಿಜವೆ...?

ಮೇರೆ ಮೀರಿದ ಕ್ರೌರ್ಯ ನೋಡಿಯೂ
ಉರಿದು ಬೀಳದವನು
ಖಳರ ಕತ್ತು ಮುರಿದು
ಕಾರಣಿಕ ತೋರಲು
ಮನಸು ಮಾಡದವನು
ಈಗ
ಹೆಣ್ಣೊಬ್ಬಳ ಕರ ನಿನ್ನ ಪಾದ
ಸೋಕಿದ್ದಕ್ಕೆ
ಎದ್ದು ನಿಂತಿದ್ದೀಯಂತೆ
ಮಡಿ ಮಣ್ಣಾಗಿ ಹೋಯಿತೆಂದು
ಕಿಡಿಕಿಡಿಯಾಗಿದ್ದೀಯಂತೆ
ಉರಿದು ಶಪಿಸುವೆಯಂತೆ ನಿಜವೆ...?

- ವನಮಾಲಾ ಸಂಪನ್ನಕುಮಾರ್

"Achala" 108, Skyline Surabhi,
14 - P, Vidyapeeta Road,
BSK III Stage,
Bangalore - 560 085

To :
Smt/Sri